March 2022
ವಿತ್ತಸಂಚಿಕೆ

# INSPIRE INDIA

ಸಲಹೆ ನಮ್ಮದು ಹೂಡಿಕೆ ನಿಮ್ಮದು



ಶರಣ್ ಪಾಟೀಲ್
ಆರ್ಥಿಕ ತಜ್ಞ

**INSPIRE INDIA WEALTH PRIVATE LTD.,** @ 65, 'Surasa Enclave' 1st Floor, Puttanna Road, Gandhi Bazar Basavanagudi, Bengaluru-560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com



ಸಂಕ್ಷಿಪ್ತತೆಯಲ್ಲಿ ಎಲ್ಲ ಶ್ರೇಷ್ಠತೆಯೂ ಅಡಗಿದೆ. ಹಣಕಾಸು ಸಚಿವರು ಮಾಡಿದ ಅತ್ಯಂತ ಸಂಕ್ಷಿಪ್ತ ಬಜೆಟ್ ಭಾಷಣ ಹೆಚ್ಚು ಪರಿಣಾಮಕಾರಿಯಾಗಿದೆ.

–ಆನಂದ್ ಮಹಿಂದ್ರಾ
ಮಹಿಂದ್ರಾ ಗ್ರೂಪ್



ಅತ್ಯಂತ ವಿವೇಚನೆಯಿಂದ ಕೂಡಿದ ಬಜೆಟ್. ಬಂಡವಾಳ ವೆಚ್ಚದಲ್ಲಿನ ಶೇ.35ರಷ್ಟು ಏರಿಕೆ ಮೂಲಸೌಕರ್ಯ ಮತ್ತು ಉದ್ಯೋಗಗಳಿಗೆ ಉತ್ತೇಜನ ನೀಡಲಿದೆ ಎಂಬ ನಂಬಿಕೆ ನನ್ನದು.

–ಕಿರಣ್ ಮುಜುಮದಾರ್ ಶಾ
ಬಯಾಕಾನ್



ಹಣಕಾಸು ಸಚಿವರು ಪ್ರಗತಿಮುಖಿ ಯಾದ ಮತ್ತು ಅಭಿವೃದ್ಧಿಪರವಾದ ಬಜೆಟ್ ಮಂಡಿಸಿದ್ದಾರೆ. ಸುಸ್ಥಿರ ಯೋಜನೆ ಮತ್ತು ಅಭಿವೃದ್ಧಿ, ಇಂಧನ ಪರಿವರ್ತನೆಗೆ ಹೆಚ್ಚಿನ ಗಮನವನ್ನು ನೀಡಿದ್ದಾರೆ.

–ಧೀರಜ್ ಹಿಂದುಜಾ
ಅಶೋಕ್ ಲೇಲಾಂಡ್ ಗ್ರೂಪ್

## ಒಳಪುಟ ನೋಟ...



ದುಡ್ಡಿನ ಪೆಟ್ಟಿಗೆ: ನಿಮ್ಮ ಹಣಕಾಸು ಅಗತ್ಯಗಳಿಗೆ ಚತುರ, ಸರಳ ದಾರಿ
ಪುಟ 5

ವರ್ಷಾಶನ ಯೋಜನೆಗಳು: ನಿಮ್ಮ ನಿವೃತ್ತಿಗೆ ಯಾವುದು ಸುರಕ್ಷಿತ?
ಪುಟ 5



# ಪ್ರಗತಿಮುಖಿ ಕೇಂದ್ರ ಬಜೆಟ್

"ಇತಿಹಾಸದ ಈ ಕ್ಷಣದಲ್ಲಿ, ಕೋವಿಡ್–ನಂತರದ ಜಗತ್ತಿನಲ್ಲಿ ರಾಜಕೀಯ, ಆರ್ಥಿಕ ಮತ್ತು ವ್ಯೂಹಾತ್ಮಕ ಸಂಬಂಧಗಳು ಬದಲಾಗುತ್ತಿರುವಾಗ ಹೊಸ ಯುಗದ ಉದಯ ಆರಂಭವಾಗಿದ್ದು ಇದರಲ್ಲಿ ಭಾರತವು ನಿಜವಾಗಿಯೂ ಹೊಸ ಭರವಸೆ ಮತ್ತು ಆಶಯಗಳ ದೇಶವಾಗಿ ಹೊರಹೊಮ್ಮಿದೆ" ಹಣಕಾಸು ಸಚಿವರು ನೀಡಿದ ಈ ಹೇಳಿಕೆ ಫೆಬ್ರುವರಿ ತಿಂಗಳ ಮೊದಲ ದಿನ ಮಂಡಿಸಿದ ನವಭಾರತದ ಬಜೆಟ್ ಬಗ್ಗೆ ಸ್ಪಷ್ಟ ದೃಷ್ಟಿಕೋನವನ್ನು ಮೂಡಿಸಿದೆ.

ಈ ಸಂದರ್ಭಕ್ಕೆ ತಕ್ಕಂತೆ, ಪ್ಯಾಂಡಮಿಕ್‌ನ ಅವಧಿಯಲ್ಲಿ ಅರ್ಥ ವ್ಯವಸ್ಥೆಯು ಸಂಕುಚಿತಗೊಂಡಿದ್ದರಿಂದಾಗಿ ಪ್ರಗತಿಯ ಮೇಲೆ ಪರಿಣಾಮ ಬೀರಿತ್ತು. ಖಾಸಗಿ ಬಳಕೆಯು ದುರ್ಬಲಗೊಂಡಿತ್ತು ಮತ್ತು ಸರ್ಕಾರದ ವೆಚ್ಚ ಕೂಡ ಅಳತೆಗೆ ತಕ್ಕಷ್ಟಿತ್ತು ಹಾಗೂ ಖಾಸಗಿ ಹೂಡಿಕೆ ಕೂಡ ಕುಸಿತದ ದಾರಿ ಹಿಡಿತ್ತು. ಇದರ ಜೊತೆಗೆ ತಗ್ಗಿದ ತೆರಿಗೆ ಸಂಗ್ರಹ ಹಾಗೂ ಆರೋಗ್ಯ ಮತ್ತು ಸಾಮಾಜಿಕ ವೆಚ್ಚದಲ್ಲಿ



ಏರಿಕೆಯಾಗಿದ್ದರಿಂದ ಹಣಕಾಸಿಗೆ ಸೀಮಿತ ಅವಕಾಶವಿತ್ತು. ಹಾಗಾಗಿ ಅತಿಯಾದ ವೆಚ್ಚ ಹಾಗೂ ಮೂಲಭೂತ ಸೌಕರ್ಯಗಳ ಮೇಲೆ ಹೆಚ್ಚಿನ ಗಮನವನ್ನು ಹರಿಸುವ ಪ್ರಗತಿಮುಖಿ ಬಜೆಟ್‌ನ ನಿರೀಕ್ಷೆ ಇತ್ತು. ಹಣಕಾಸು ಸಚಿವರು ಅಂತಿಮವಾಗಿ ಈ ಬಜೆಟ್‌ನಲ್ಲಿ ಎಲ್ಲದಕ್ಕೂ ಅವಕಾಶ ಮಾಡಿಕೊಟ್ಟಂತೆ ಕಾಣುತ್ತದೆ.

ಬಜೆಟ್ 2021–22ರ ಹಣಕಾಸು ವರ್ಷಕ್ಕೆ ದಿಟ್ಟತನದಿಂದ ಕೂಡಿದ ಸ್ಪಷ್ಟ ಹಾಗೂ ನಿರ್ಣಾಯಕ ಕಾರ್ಯಕ್ರಮವನ್ನು ಹೊಂದಿದೆ ಮತ್ತು ಆರ್ಥಿಕ ಪ್ರಗತಿಗೆ ಉತ್ತೇಜನ ನೀಡುವುದಕ್ಕೆ ಗಮನವನ್ನು ನೀಡಿದೆ. ಮೊಟ್ಟ ಮೊದಲ ಡಿಜಿಟಲ್ ಬಜೆಟ್ ಎಂಬ ಹಿರಿಮೆಯಿಂದ ಹಿಡಿದು ಈ ಬಜೆಟ್ ಅನೇಕ ಸಂಗತಿಗಳನ್ನು ಹೊರಹೊಮ್ಮಿಸಿದೆ. ಈ ಹಿಂದಿನ ಹಲವಾರು ಬಜೆಟ್‌ಗಳ ಒಳಮರ್ಮವೇ ಆಗಿದ್ದ ಹಣಕಾಸು ವಿವೇಚನೆಯ ಅಡೆತಡೆಗಳನ್ನು ಅದು ನಿವಾರಿಸಿದೆ. ಈಗಾಗಲೇ ತೆರಿಗೆ ಹೇರಿರುವುದು ಮತ್ತು ಯಾವುದೇ ರಹಸ್ಯವಾದ ಹೆಚ್ಚುವರಿ ತೆರಿಗೆಗಳ ನಡುವೆ ತೇಪೆಹಚ್ಚುವ ಕೆಲಸ ಮಾಡಿಲ್ಲ. ವಿಷಯಗಳು ಹೆಚ್ಚು ಪಾರದರ್ಶಕವಾಗಿವೆ ಮತ್ತು ತೆರಿಗೆ ಸಂಗ್ರಹ ಮತ್ತು ಇತರ ಬಂಡವಾಳ ಹಿಂತೆಗೆತದಂತಹ ಗುರಿಗಳು ಹೆಚ್ಚು ವಾಸ್ತವದಿಂದ ಕೂಡಿದೆ ಹಾಗೂ ಕಾರ್ಯಸಾಧುವಾಗಿವೆ. ಒಟ್ಟಾರೆಯಾಗಿ ಬಜೆಟ್ ಧನಾತ್ಮಕವಾದ ಅಚ್ಚರಿಯಂತೆ ಕಾಣುತ್ತಿದೆ ಮತ್ತು ಈಗಾಗಲೇ ಉತ್ತೇಜಿಸಲಾಗಿರುವ ಭಾವನೆಗಳಿಗೆ ಅತ್ಯಗತ್ಯವಾದ ನೆಮ್ಮದಿಯನ್ನು ನೀಡಿದೆ ಹಾಗೂ ಅಭಿವೃದ್ಧಿ ಅಲೆಯ ಭರವಸೆಯನ್ನು ಅನಾವರಣಗೊಳಿಸಿದೆ. ಇಡೀ ಬಜೆಟ್‌ನ ಒಂದು ಪಕ್ಷಿನೋಟ ಇಲ್ಲಿದೆ:

## ಪ್ರಮುಖ ಧ್ಯೇಯಗಳು ಮತ್ತು ಮುಖ್ಯಾಂಶಗಳು

### ಆರೋಗ್ಯ ಮತ್ತು ಯೋಗಕ್ಷೇಮ

- ಆರೋಗ್ಯ ಸೇವಾ ಸೌಲಭ್ಯಕ್ಕೆ ನೀಡಲಾಗುವ ಹಂಚಿಕೆಯಲ್ಲಿ ತೀವ್ರ ಏರಿಕೆ– 2.24 ಕೋಟಿ ರೂ.–ಶೇ.137ರಷ್ಟು ಹೆಚ್ಚಳ
- ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಪ್ರಧಾನ ಮಂತ್ರಿ ಆತ್ಮನಿರ್ಭರ್ ಸ್ವಾಸ್ಥ





ಭಾರತ್ ಯೋಜನೆ (6 ವರ್ಷಗಳ ಅವಧಿಗೆ 64,180 ಕೋಟಿ ರೂ.).

- ಪೂರಕ ಪೋಷಕಾಂಶ ಕಾರ್ಯಕ್ರಮ ಮತ್ತು ಪೋಷಣ್ ಅಭಿಯಾನವನ್ನು ವಿಲೀನಗೊಳಿಸಿ ಮಿಷನ್ ಪೋಷಣ್–2.0 ಎಂದು ಆರಂಭಿಸಲಾಗುತ್ತದೆ.
- ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವತ್ರಿಕ ನೀರು ಸರಬರಾಜಿಗಾಗಿ ಜಲ ಜೀವನ್ ಅಭಿಯಾನ (ನಗರ) ಆರಂಭ.
- ಐದು ವರ್ಷಗಳಿಗೆ ಒಟ್ಟು 1.42 ಲಕ್ಷ ಕೋಟಿ ರೂ. ಸ್ವರೂಪದ ನಗರ ಸ್ವಚ್ಛ ಭಾರತ್ ಅಭಿಯಾನ
- ಕೋವಿಡ್–19 ಲಸಿಕೆಗೆ 35,000 ಕೋಟಿ ರೂ.
- ವಾಹನಗಳನ್ನು ಸ್ವಯಂ ಸ್ಕ್ರಾಪ್ ಮಾಡುವ ನೀತಿ ಪ್ರಕಟ.

## ಭೌತಿಕ ಮತ್ತು ಹಣಕಾಸು ಬಂಡವಾಳ ಮತ್ತು ಮೂಲಭೂತ ಸೌಕರ್ಯ

### ಭೌತಿಕ ಬಂಡವಾಳ

- ಆತ್ಮನಿರ್ಭರ್ ಭಾರತ– ತಯಾರಿಕಾ ಉದ್ಯಮವನ್ನು ಬಲಪಡಿಸಲು 13 ವಲಯಗಳಿಗಾಗಿ ಉತ್ಪಾದನಾ ಆಧಾರಿತ ಉತ್ತೇಜನ ಯೋಜನೆ (ಪಿಎಲ್ಐ)–ಐದು ವರ್ಷಗಳಿಗೆ 1.97 ಲಕ್ಷ ಕೋಟಿ.
- ವಿಶ್ವದರ್ಜೆಯ ಮೂಲಸೌಕರ್ಯಗಳನ್ನು ಸೃಷ್ಟಿಸಲು ಮಿತ್ರಾ (ಮೆಗಾ ಬಂಡವಾಳದ ಜವಳಿ ಪಾರ್ಕ್‌ಗಳು) ಯೋಜನೆ. ಮೂರು ವರ್ಷಗಳಲ್ಲಿ 7 ಅಂತಹ ಪಾರ್ಕ್‌ಗಳ ನಿರ್ಮಾಣ.
- ರಾಷ್ಟ್ರೀಯ ಮೂಲಸೌಕರ್ಯ ಕೊಳವೆಮಾರ್ಗ (ಎನ್ಐಪಿ) ಈಗ 7400 ಯೋಜನೆಗಳನ್ನು ವ್ಯಾಪಿಸಿದೆ.
- ಡಿಎಫ್ಐ (ಅಭಿವೃದ್ಧಿ ಹಣಕಾಸು ಸಂಸ್ಥೆ)ರಚಿಸಲು ಮಸೂದೆ – ಮೂಲಸೌಕರ್ಯ ಹಣಕಾಸಿಗೆ ಪೂರೈಕೆದಾರರಾಗಿ, ಸಕ್ರಿಯದಾರರಾಗಿ ಮತ್ತು ವೇಗವರ್ಧಕರಾಗಿ ಕೆಲಸ ಮಾಡುವ ಉದ್ದೇಶದಿಂದ. ಮುಂದಿನ ಮೂರು ವರ್ಷಗಳಲ್ಲಿ ಕನಿಷ್ಠ 5 ಲಕ್ಷ ಕೋಟಿ ರೂ. ಸಾಲ ನೀಡಿಕೆಯ ಬಂಡವಾಳ ಪಟ್ಟಿಯನ್ನು ಹೊಂದುವ ಗುರಿ.
- ವಿದೇಶಿ ಬಂಡವಾಳ ಪಟ್ಟಿ ಹೂಡಿಕೆದಾರರಿಂದ **InVIT** ಮತ್ತು **REIT**ಗಳ ಸಾಲದ ಹಣಕಾಸನ್ನು ಸಕ್ರಿಯಗೊಳಿಸಲಾಗುವುದು.
- ಸಂಭಾವ್ಯ ಬ್ರೌನ್‌ಫೀಲ್ಡ್ ಮೂಲಸೌಕರ್ಯ ಆಸ್ತಿಗಳ ರಾಷ್ಟ್ರೀಯ ಹಣಗಳಿಕೆ ಪೈಪ್‌ಲೈನ್‌ನ್ನು ಆರಂಭಿಸಲಾಗುವುದು. ಆಸ್ತಿಗಳ ಹಣಗಳಿಕೆಯಲ್ಲಿ ರಸ್ತೆ ಯೋಜನೆಗಳು, ವಿದ್ಯುತ್ ಪ್ರಸರಣ, ರೈಲ್ವೆಗಳಿಂದ ಮೀಸಲಾದ ಸರಕು ಕಾರಿಡಾರ್ (ಡಿಎಫ್‌ಸಿ), ವಿಮಾನ ನಿಲ್ದಾಣಗಳು, ತೈಲ ಮತ್ತು ಅನಿಲ ಪೈಪ್‌ಲೈನ್‌ಗಳು, ದಾಸ್ತಾನು ಮಾಡುವ ಆಸ್ತಿಗಳು, ಕ್ರೀಡಾ ಮೈದಾನಗಳು ಇತ್ಯಾದಿ ಒಳಗೊಂಡಿರುತ್ತವೆ.

### ಮೂಲಭೂತ ಸೌಕರ್ಯ

- ಬಂಡವಾಳ ವೆಚ್ಚದಲ್ಲಿ 5.54 ಲಕ್ಷ ಕೋಟಿ ರೂ.ಗಳಷ್ಟು ತೀವ್ರ ಪ್ರಮಾಣದ ಏರಿಕೆ–ಶೇ.34.5ರಷ್ಟು ಹೆಚ್ಚಳ. ರಾಜ್ಯ ಮತ್ತು ಸ್ವಾಯತ್ತ ಸಂಸ್ಥೆಗಳ ಬಂಡವಾಳ ವೆಚ್ಚಕ್ಕೆ ಹೆಚ್ಚುವರಿಯಾಗಿ ಎರಡು ಲಕ್ಷ ಕೋಟಿ ರೂ.
- 5.35 ಲಕ್ಷ ಕೋಟಿ ರೂ. ಮೌಲ್ಯದ ಭಾರತ್‌ಮಾಲಾ ಪರಿಯೋಜನಾ ಯೋಜನೆಯ ಅಡಿಯಲ್ಲಿ 3.3 ಲಕ್ಷ ಕೋಟಿ ರೂಪಾಯಿ ವೆಚ್ಚದಲ್ಲಿ 13,000 ಕಿ.ಮೀ. ರಸ್ತೆಗಳನ್ನು ಈಗಾಗಲೇ ನಿರ್ಮಿಸಲಾಗಿದೆ.
- ಇನ್ನಷ್ಟು ರಸ್ತೆ ಮೂಲಸೌಕರ್ಯವನ್ನು ಬೆಳೆಸುವ ದೃಷ್ಟಿಯಿಂದ ಮತ್ತಷ್ಟು ಆರ್ಥಿಕ ಕಾರಿಡಾರ್‌ಗಳನ್ನು ಯೋಜಿಸಲಾಗುತ್ತಿದೆ.
- ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕಾಗಿ 1.18 ಲಕ್ಷ ಕೋಟಿ ರೂ. ಅಧಿಕ ಬಂಡವಾಳದ ಯೋಜನೆ (ಮೂಲ ಬಂಡವಾಳಕ್ಕಾಗಿ 1.08 ಲಕ್ಷ ಕೋಟಿ ರೂ.)
- ರೈಲ್ವೆಗಾಗಿ 1.10 ಕೋಟಿ ರೂ.ಗಳ ಅಧಿಕ ಬಂಡವಾಳ ಯೋಜನೆ (ಮೂಲ ಬಂಡವಾಳವಾಗಿ 1.07 ಲಕ್ಷ ಕೋಟಿ ರೂ.).
- 2030ರ ಹೊತ್ತಿಗೆ 'ಭವಿಷ್ಯಕ್ಕೆ ಸಿದ್ಧ'ವಾದ ರೈಲ್ವೆ ವ್ಯವಸ್ಥೆಯನ್ನು ಸೃಷ್ಟಿಸಲು ಭಾರತಕ್ಕಾಗಿ ರಾಷ್ಟ್ರೀಯ ರೈಲು ಯೋಜನೆ–2030.
- 2022ರ ಹೊತ್ತಿಗೆ ಪಶ್ಚಿಮ ಹಾಗೂ ಪೂರ್ವ ಡಿಎಫ್‌ಸಿಯ ಕಾರ್ಯಾರಂಭ.
- 2023ರ ಡಿಸೆಂಬರ್ ಹೊತ್ತಿಗೆ ಬ್ರಾಡ್–ಗೇಜ್ ಮಾರ್ಗಗಳ ಶೇ.100ರಷ್ಟು ವಿದ್ಯುದ್ದೀಕರಣ.
- 20,000 ಬಸ್‌ಗಳ ಗುರಿಯೊಂದಿಗೆ ಪಿಪಿಪಿ ಮಾದರಿಯಲ್ಲಿ ಸಾರ್ವಜನಿಕ ಬಸ್ ಸಾರಿಗೆ ಸೇವೆಗಳನ್ನು ಹೆಚ್ಚಿಸಲಾಗುವುದು.
- ಸಣ್ಣ ಪುಟ್ಟ ನಗರಗಳು ಮತ್ತು ಪಟ್ಟಣಗಳಲ್ಲಿ ಕಡಿಮೆ ವೆಚ್ಚದ ಮೆಟ್ರೋ ರೈಲು ವ್ಯವಸ್ಥೆಯನ್ನು ಕಲ್ಪಿಸಲು ಮೆಟ್ರೋಲೈಟ್ ಮತ್ತು ಮೆಟ್ರೋನಿಯೋ ತಂತ್ರಜ್ಞಾನಗಳ ಬಳಕೆ.
- ಮುಂದಿನ ಐದು ವರ್ಷಗಳ ಅವಧಿಗೆ 3.06 ಲಕ್ಷ ಕೋಟಿ ರೂ. ವೆಚ್ಚದೊಂದಿಗೆ ಪರಿಷ್ಕೃತ ಸುಧಾರಣೆ–ಆಧಾರಿತ ಫಲಿತಾಂಶ–ಸಂಪರ್ಕಿತ ವಿದ್ಯುತ್ ವಿತರಣೆ ವಲಯ ಯೋಜನೆ.
- ಈಗಾಗಲೇ 8 ಕೋಟಿ ಮನೆಗಳಿಗೆ ಪ್ರಯೋಜನವಾಗಿರುವ ಉಜ್ವಲಾ ಯೋಜನೆಯನ್ನು ಇನ್ನೂ ಒಂದು ಕೋಟಿ ಫಲಾನುಭವಿಗಳಿಗೆ ವಿಸ್ತರಿಸಲಾಗುತ್ತದೆ.
- ನಗರ ಅನಿಲ ವಿತರಣೆ ಜಾಲಕ್ಕೆ ಮುಂದಿನ ಮೂರು ವರ್ಷಗಳಲ್ಲಿ ಇನ್ನೂ 100 ಜಿಲ್ಲೆಗಳನ್ನು ಸೇರಿಸುವುದು.

### ವಿತ್ತೀಯ ಬಂಡವಾಳ

- ಸಾರ್ವಜನಿಕ ವಲಯದ ಬ್ಯಾಂಕುಗಳ ತೀವ್ರ ತರದ ಸಮಸ್ಯೆಗಳಿಂದ ಕೂಡಿದ ಆಸ್ತಿಗಳ ಸಮಸ್ಯೆಯನ್ನು ನಿವಾರಿಸಲು ಆಸ್ತಿ ಪುನರ್‌ನಿರ್ಮಾಣ ಸಂಸ್ಥೆ ನಿಯಮಿತ ಮತ್ತು ಆಸ್ತಿ ನಿರ್ವಹಣಾ ಸಂಸ್ಥೆ.
- ವಿಮಾ ವಲಯದಲ್ಲಿನ ಎಫ್‌ಡಿಐ ಮಿತಿಯನ್ನು ಶೇ.49ರಿಂದ 74ಕ್ಕೆ ಏರಿಕೆ.
- 2022ರ ಹೊತ್ತಿಗೆ ಸುಧಾರಿತ ಏಕ ಸೆಕ್ಯುರಿಟಿ ಮಾರುಕಟ್ಟೆ ಕೋಡ್.
- GIFT-IFSCಯಲ್ಲಿ ವಿಶ್ವದರ್ಜೆಯ ಹಣಕಾಸು–ತಂತ್ರಜ್ಞಾನ ಕೇಂದ್ರ ಅಭಿವೃದ್ಧಿ.
- ಕಾರ್ಪೊರೇಟ್ ಬಾಂಡ್ ಮಾರುಕಟ್ಟೆಗೆ ಶಾಶ್ವತ ಸಾಂಸ್ಥಿಕ ಚೌಕಟ್ಟು.
- ಸರಕು ಮಾರುಕಟ್ಟೆ ವ್ಯವಸ್ಥೆಯ ಅಭಿವೃದ್ಧಿಗೆ ನಿಯಂತ್ರಕನಾಗಿ ಸೆಬಿಗೆ ಜವಾಬ್ದಾರಿ.
- ಸಾರ್ವಜನಿಕ ವಲಯದ ಬ್ಯಾಂಕುಗಳ ಮರುಬಂಡವಾಳೀಕರಣಕ್ಕಾಗಿ 20,000 ಕೋಟಿ. ರೂ.
- ಎಲ್ಲಾ ಹಣಕಾಸು ಉತ್ಪನ್ನಗಳಿಗೆ ಎಲ್ಲ ಹಣಕಾಸು ಹೂಡಿಕೆದಾರರ ಹಕ್ಕನ್ನು ನೀಡಲು ಹೂಡಿಕೆದಾರರ ಸನ್ನದು.
- ಸೀಮಿತ ಬಾಧ್ಯತಾ ಪಾಲುದಾರಿಕೆ (ಎಲ್‌ಎಲ್‌ಪಿ) ಕಾಯ್ದೆ, 2008ರ ನಿರಾಪರಾಧೀಕರಣವನ್ನು ಕೈಗೆತ್ತಿಕೊಳ್ಳುವುದು.
- ಎರಡು ಲಕ್ಷಕ್ಕೂ ಹೆಚ್ಚು ಕಂಪನಿಗಳಿಗೆ ಪ್ರಯೋಜನ ಕಲ್ಪಿಸುವ ಉದ್ದೇಶದಿಂದ ಸಣ್ಣ ಕಂಪನಿಗಳ ಪರಿಷ್ಕೃತ ವ್ಯಾಖ್ಯಾನ ನೀಡಲಾಗಿದ್ದು ಪಾವತಿಸಲಾದ ಬಂಡವಾಳವನ್ನು




## ಮಹತ್ವಾಕಾಂಕ್ಷಿ ಭಾರತದ ಅಂತರ್ಗತ ಅಭಿವೃದ್ಧಿ

- **ಕೃಷಿ ಸಾಲದ ಗುರಿಯನ್ನು 16.5 ಲಕ್ಷ ಕೋಟಿಗೆಗಳಿಗೆ ಹೆಚ್ಚಿಸಲಾಗಿದೆ, ಶೇ.10ರಷ್ಟು ಏರಿಕೆ**
- **ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿಗೆ ಅನುದಾನದಲ್ಲಿ ಹೆಚ್ಚಳ**
- **ಆಧುನಿಕ ಮೀನುಗಾರಿಕಾ ಬಂದರುಗಳು ಮತ್ತು ಮೀನು ತುಂಬುವ ಕೇಂದ್ರಗಳ ಅಭಿವೃದ್ಧಿ**
- **ಇ–ಎನ್‌ಎಎಂನೊಂದಿಗೆ 1000ಕ್ಕೂ ಹೆಚ್ಚು ಮಂಡಿಗಳನ್ನು ಸಮಗ್ರಗೊಳಿಸಲಾಗುವುದು.**
- **ವಲಸೆ ಕಾರ್ಮಿಕರಿಗೆ ಸಹಾಯವಾಗುವ ದೃಷ್ಟಿಯಿಂದ ಒಂದು ರಾಷ್ಟ್ರ ಮತ್ತು ಒಂದು ಪಡಿತರ ಚೀಟಿ ಯೋಜನೆ.**
- **ಗಿಗ್ ಮತ್ತು ಪ್ಲಾಟ್‌ಫಾರಂ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಪ್ರಯೋಜನಗಳನ್ನು ವಿಸ್ತರಿಸಲಾಗುವುದು.**
- **ರಾತ್ರಿ ಪಾಳಿಯೂ ಸೇರಿದಂತೆ ಎಲ್ಲ ವಿಭಾಗಗಳಲ್ಲಿಯೂ ಕೆಲಸ ಮಾಡಲು ಮಹಿಳೆಯರಿಗೆ ಅವಕಾಶ.**
- **ಎಂಎಸ್‌ಎಂಇ ವಲಯಕ್ಕೆ 15,700 ಕೋಟಿ ರೂ. ಅನುದಾನ.**

50ಲಕ್ಷದಿಂದ 2ಕೋಟಿ ರೂ.ಗೆ ಹೆಚ್ಚಿಸಲಾಗಿದೆ ಮತ್ತು ಒಟ್ಟು ವಹಿವಾಟನ್ನು 2 ಕೋಟಿ ರೂ.ಗಳಿಂದ 20 ಕೋಟಿ ಕೋಟಿಗೆ ಹೆಚ್ಚಿಸಲಾಗಿದೆ.

- ಪಾವತಿಸಲಾದ ಬಂಡವಾಳ ಮತ್ತು ಒಟ್ಟು ವಹಿವಾಟು ಹಾಗೂ ಯಾವುದೇ ಕಾಲದಲ್ಲಿ ಸ್ವರೂಪದಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಲು ಯಾವುದೇ ನಿರ್ಬಂಧಗಳನ್ನು ವಿಧಿಸದೇ ಏಕ ವ್ಯಕ್ತಿಯ ಕಂಪೆನಿಗಳಿಗೆ (ಓಪಿಸಿ) ಉತ್ತೇಜನ ನೀಡುವ ಮೂಲಕ ಅವುಗಳ ಬೆಳವಣಿಗೆಗೆ ಅವಕಾಶ.
- ಎರಡು ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಮತ್ತು ಒಂದು ಜನರಲ್ ಇನ್ಸೂರೆನ್ಸ್ ಕಂಪನಿಯ ಖಾಸಗೀಕರಣ.
- 2022ರ ಹಣಕಾಸು ವರ್ಷದಲ್ಲಿ ಎಲ್‌ಐಸಿಯ ಐಪಿಓ.

### 100 ಹೊಸ ಸೈನಿಕ ಶಾಲೆಗಳು

- ಭಾರತೀಯ ಉನ್ನತ ಶಿಕ್ಷಣ ಆಯೋಗ ಸ್ಥಾಪಿಸಲು ಶಾಸನ ಮಂಡನೆ
- ಬುಡಕಟ್ಟು ಪ್ರದೇಶಗಳಲ್ಲಿ 750 ಏಕಲವ್ಯ ಶಾಲೆಗಳು.
- ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕಾಗಿ ಸುಧಾರಿತ ಮೆಟ್ರಿಕ್ ಪೂರ್ವದ ವಿದ್ಯಾರ್ಥಿ ವೇತನ ಯೋಜನೆ.
- ಎಂಜಿನಿಯರಿಂಗ್‌ನಲ್ಲಿ ಪದವಿ ಮತ್ತು ಡಿಪ್ಲಮೋಗಳನ್ನು ಹೊಂದಿದವರಿಗೆ ರಾಷ್ಟ್ರೀಯ ಅಪ್ರೆಂಟಿಸ್‌ಶಿಪ್ ತರಬೇತಿ ಯೋಜನೆಯ ಮರುಜೋಡಣೆ.
- ಕೌಶಲ ಅಭಿವೃದ್ಧಿ ಮತ್ತು ಮಾನ್ಯತೆ ಕ್ಷೇತ್ರದಲ್ಲಿ ಯುಎಇ ಮತ್ತು ಜಪಾನ್ ಜೊತೆ ಪಾಲುದಾರಿಕೆ.
- ಉನ್ನತ ಶಿಕ್ಷಣ ಕೈಗೆಟಕುವಂತೆ ಮಾಡಲು ಲೇಹ್‌ನಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ

### ಕನಿಷ್ಠ ಸರ್ಕಾರ ಮತ್ತು ಗರಿಷ್ಠ ಆಡಳಿತ

- ಪೂರಕ ಆರೋಗ್ಯ ಸೇವಾ ವೃತ್ತಿಪರರ ಮಸೂದೆಗೆ ರಾಷ್ಟ್ರೀಯ ಆಯೋಗ ಆರಂಭ
- ಒಪ್ಪಂದಗಳಿಗೆ ಸಂಬಂಧಿಸಿದ ವಿವಾದಗಳ ತ್ವರಿತ ನಿರ್ಣಯಕ್ಕೆ ರಾಜಿಸಂಧಾನದ ವ್ಯವಸ್ಥೆ.
- ಮೊಟ್ಟ ಮೊದಲ ಡಿಜಿಟಲ್ ಜನಗಣತಿಗೆ 3,768 ಕೋಟಿ ರೂ. ಹಂಚಿಕೆ

### ನೇರ ತೆರಿಗೆ ಪ್ರಸ್ತಾಪಗಳು:

- ವೈಯಕ್ತಿಕ ಹಾಗೂ ಕಾರ್ಪೊರೇಟ್ ತೆರಿಗೆ ದರಗಳಲ್ಲಿ/ಸ್ವರೂಪಗಳಲ್ಲಿ ಯಾವುದೇ ಬದಲಾವಣೆ ಇಲ್ಲ.
- ಪಿಂಚಣಿ ಮತ್ತು ಬಡ್ಡಿ ಆದಾಯವನ್ನು ಮಾತ್ರ ಹೊಂದಿರುವ ಹಿರಿಯ ನಾಗರಿಕರಿಗೆ (75 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟವರು) ಆದಾಯ ತೆರಿಗರ ಸಲ್ಲಿಕೆಯಲ್ಲಿ ವಿನಾಯಿತಿ. ಪಿಂಚಣಿ ಮತ್ತು ಬ್ಯಾಂಕಿನಿಂದ ಬಡ್ಡಿ ಆದಾಯವನ್ನು ಅಂತಹ ಹಿರಿಯ ನಾಗರಿಕರಿಂದ ಬ್ಯಾಂಕುಗಳು ತೆರಿಗೆಯನ್ನು ಕಡಿತ ಮಾಡಿಕೊಳ್ಳುವುದು.
- ವಾರ್ಷಿಕ 2.5ಲಕ್ಷ ರೂ. ಕೊಡುಗೆಯ ಮಿತಿಗೆ ಒಳಪಟ್ಟು ಅನೇಕ ಭವಿಷ್ಯ ನಿಧಿಗೆ ನೀಡಿದ ನೌಕರರ ಕೊಡುಗೆಯ ಮೇಲೆ ಗಳಿಸಿದ ಬಡ್ಡಿ ಆದಾಯಕ್ಕೆ ತೆರಿಗೆ ವಿನಾಯ್ತಿ.



## ಮಾನವ ಬಂಡವಾಳದ ಬಲವರ್ಧನೆ

**15000ಕ್ಕೂ ಅಧಿಕ ಶಾಲೆಗಳನ್ನು ಗುಣಾತ್ಮಕವಾಗಿ ಬಲಪಡಿಸಲಾಗುವುದು.**

- 2.5 ಲಕ್ಷ ರೂ.ಗಿಂತ ಹೆಚ್ಚು ವಾರ್ಷಿಕ ಪ್ರೀಮಿಯಂನ್ನು ಹೊಂದಿರುವ ಯೂನಿಟ್-ಆಧಾರಿತ ವಿಮಾ ಯೋಜನೆ (ಯುಎಲ್‌ಐಪಿ)ಗಳಿಂದ ಗಳಿಸಿದ ಅವಧಿ ಮುಗಿದ ನಂತರದ ಪಾಲಿಸಿ ಮೊತ್ತ ಈಗ ಬಂಡವಾಳ ಗಳಿಕೆ ತೆರಿಗೆಗೆ ಒಳಪಡುತ್ತದೆ.
- ಅನೇಕ ಕಾರ್ಪೊರೇಟ್ ಸಂಸ್ಥೆಗಳಿಗೆ ಬಿಡುಗಡೆಯನ್ನು ನೀಡುವ ಉದ್ದೇಶದಿಂದ ತೆರಿಗೆ ಲೆಕ್ಕಪರಿಶೋಧನೆಗೆ ಇದ್ದ ಮಿತಿಯನ್ನು 5ರಿಂದ 10 ಕೋಟಿ ರೂ.ಗೆ ಹೆಚ್ಚಿಸಲಾಗಿದೆ (ಕೇವಲ ಶೇ.95ರಷ್ಟು ಪಾವತಿ ಡಿಜಿಟಲೀಕರಣ ಆಗಿರುವಲ್ಲಿ ಮಾತ್ರ).
- ಲಾಭಾಂಶ ಆದಾಯ ಘೋಷಣೆ ಮಾಡಿದ್ದರೆ ಮಾತ್ರ ಮುಂಗಡ ತೆರಿಗೆ
- ಕೈಗೆಟಕುವ ಮನೆ ಖರೀದಿಗೆ ನೀಡಲಾಗುವ 1.5 ಲಕ್ಷ ಹೆಚ್ಚುವರಿ ಕಡಿತವನ್ನು ಮುಂದಿನ ವರ್ಷಕ್ಕೆ ವಿಸ್ತರಿಸಲಾಗಿದೆ.
- REIT/InvITಗೆ ನೀಡಲಾಗುತ್ತಿದ್ದ ಲಾಭಾಂಶದ ಪಾವತಿಯನ್ನು ಟಿಡಿಎಸ್‌ನಿಂದ ವಿನಾಯ್ತಿ ನೀಡಲಾಗಿದೆ.
- ಆದಾಯ ತೆರಿಗೆ ಮೌಲ್ಯಮಾಪನವನ್ನು ಪುನರಾರಂಭಿಸುವ ಸಮಯದ ಮಿತಿಯನ್ನು 6 ವರ್ಷಗಳಿಂದ 3 ವರ್ಷಗಳಿಗೆ ಇಳಿಸಲಾಗುವುದು.
- ನವೋದ್ಯಮಗಳಿಗೆ ತೆರಿಗೆ ರಜೆಯನ್ನು ಇನ್ನೂ ಒಂದು ವರ್ಷಕ್ಕೆ ವಿಸ್ತರಿಸಲಾಗಿದೆ.
- 2021ರ ಜೂನ್ 30ರೊಳಗೆ ಮಾರಾಟ ಮಾಡಲಾಗಿದ್ದರೆ ವಸತಿ ಘಟಕದ ಸ್ಟಾಂಪ್ ಡ್ಯುಟಿ ಮೌಲ್ಯವು ಒಟ್ಟು ಮೊತ್ತದ ಶೇ.120ರಷ್ಟಾಗಿರಬಹುದು (ಈ ಹಿಂದೆ ಶೇ.110).

## ಹೊಸ ಆವಿಷ್ಕಾರ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ

- ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ – ಮುಂದಿನ 5 ವರ್ಷಗಳಿಗೆ 50,000 ಕೋಟಿ ರೂ. ಯೋಜನಾ ಸ್ವರೂಪ.
- ಡಿಜಿಟಲ್ ಮಾದರಿಯ ಪಾವತಿಗೆ ಉತ್ತೇಜನವನ್ನು ನೀಡಲು ಹಣಕಾಸು ಉತ್ತೇಜನ.
- ಇಂಟರ್‌ನೆಟ್ ಸೌಲಭ್ಯಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲು ರಾಷ್ಟ್ರೀಯ ಭಾಷಾ ಭಾಷಾಂತರ ಅಭಿಯಾನ.
- ಸಾಗರ ಪರಿಶೋಧನೆ ಮತ್ತು ಜೈವಿಕ ವೈವಿಧ್ಯತೆಯ ಸಂರಕ್ಷಣೆಗೆ ಆಳ ಸಮುದ್ರ ಅಭಿಯಾನಕ್ಕೆ ಮುಂದಿನ 5 ವರ್ಷಗಳಲ್ಲಿ 4000 ಕೋಟಿ ರೂ. ಯೋಜನಾ ಸ್ವರೂಪ.

- ನೌಕರರ ಪಿಎಫ್ ಪಾಲನ್ನು ಕಡಿತ ಮಾಡಿಕೊಂಡು ಅದನ್ನು ಮಾಲೀಕನು ಠೇವಣಿ ಇಡದೇ ಇದ್ದರೆ ಆ ಮಾಲೀಕನಿಗೆ ಕಡಿತವನ್ನಾಗಿ ಪರಿಗಣಿಸಲು ಅವಕಾಶ ನೀಡಲಾಗುವುದಿಲ್ಲ.
- ವೇತನ, ತೆರಿಗೆ ಪಾವತಿ, ಟಿಡಿಎಸ್, ಬಂಡವಾಳ ಗಳಿಕೆ, ಲಾಭಾಂಶ ಮತ್ತು ಬಡ್ಡಿ ಆದಾಯ ಇತ್ಯಾದಿ ವಿವರಗಳೊಂದಿಗೆ ಆದಾಯ ಸಲ್ಲಿಕೆಯ ಪೂರ್ವಭರ್ತಿಗೆ ಅವಕಾಶ.
- ಎನ್‌ಆರೈಗಳಿಗೆ ದ್ವಿ-ತೆರಿಗೆಯ ಸಮಸ್ಯೆಯನ್ನು ನಿವಾರಣೆ ಮಾಡಲು ನಿಯಮಗಳನ್ನು ಸೂಚಿಸುವ ಪ್ರಸ್ತಾವನೆ.
- 50 ಲಕ್ಷದ ತನಕ ತೆರಿಗೆ ವ್ಯಾಪ್ತಿಗೆ ಒಳಪಡುವ ಆದಾಯ ಮತ್ತು 10 ಲಕ್ಷದ ತನಕ ವಿವಾದಾತ್ಮಕ ಆದಾಯದೊಂದಿಗೆ ಸಣ್ಣ ತೆರಿಗೆದಾರರಿಗೆ ವಿವಾದ ಪರಿಹಾರ ಸಮಿತಿ ರಚನೆ.
- ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯ ಪ್ರಾಮುಖ್ಯತೆಯನ್ನು ತಗ್ಗಿಸಲಾಗುವುದು.

**ಒಟ್ಟಾರೆಯಾಗಿ:** ವಿತ್ತೀಯ ಕೊರತೆಯನ್ನು ಶೇ.6.8ಕ್ಕೆ ಕುಸಿಯುವ ಹಾಗೆ ನೋಡಿಕೊಂಡ ಸರ್ಕಾರ ಪ್ರಗತಿಯ ಮೇಲೆ ದೃಷ್ಟಿಯನ್ನು ನೆಟ್ಟಿದೆ. ಮುಂದಿನ ವರ್ಷಕ್ಕೆ ಒಟ್ಟಾರೆ ಮಾರುಕಟ್ಟೆ ಖರೀದಿ 12 ಲಕ್ಷ ಕೋಟಿ ಎಂದು ನಿರೀಕ್ಷಿಸಲಾಗಿದೆ. ಪ್ರಗತಿಮುಖೀ ಬಜೆಟ್ ಆರೋಗ್ಯ ಸೇವಾ ಸೌಲಭ್ಯ, ಮೂಲಸೌಕರ್ಯ, ಕೃಷಿ, ಶಿಕ್ಷಣ, ಬಂಡವಾಳ ಹಿಂತೆಗೆತ, ತೆರಿಗೆ ಕಾನೂನುಗಳ ಸರಳೀಕರಣ, ಹಣಕಾಸು ವಲಯ ಮತ್ತು ನೇರ ತೆರಿಗೆಗಳ ಪುನಾರಚನೆಗೆ ಭಾರಿ ಗಮನವನ್ನು ನೀಡಿದೆ. ಜೊತೆಗೆ ಸಬ್ಸಿಡಿ ಮೇಲಿನ ಆದ್ಯತೆಯನ್ನು ತಗ್ಗಿಸಿದೆ. ಇವೆಲ್ಲದರ ನಡುವೆಯೇ ಆಹಾರ, ಕುಡಿಯುವ ನೀರಿನ ಲಭ್ಯತೆ, ಮಾಲಿನ್ಯದ ಮೇಲೆ ನಿಯಂತ್ರಣ ಮತ್ತು ಕೈಗೆಟಕುವ ವಸತಿಗೆ ಉತ್ತೇಜನವನ್ನು ನೀಡುವ ಮೂಲಕ ಗುಣಮಟ್ಟದ ಜೀವನದ ಸುಧಾರಣೆಯ ಕಡೆಗೂ ಸರ್ಕಾರ ಚಿಂತಿಸದೇ ಬಿಟ್ಟಿಲ್ಲ.

ಆತ್ಮನಿರ್ಭರ ಭಾರತದ ಅಡಿಯಲ್ಲಿ ಆರ್ಥಿಕ ಪುನಶ್ಚೇತನಕ್ಕೆ ಮೂಲಸೌಕರ್ಯ ಹಾಗೂ ತಯಾರಿಕಾ ವಲಯಕ್ಕೆ ಸರ್ಕಾರ ಪ್ರಾಶಸ್ತ್ಯವನ್ನು ನೀಡಿರುವುದರ ಮೇಲೆ ಬಜೆಟ್ ನಿಂತಿದೆ. ಬಂಡವಾಳದ ವೆಚ್ಚಕ್ಕೆ ಅನುದಾನವನ್ನು ಹೆಚ್ಚಿಸುವುದರ ಮೂಲಕ ಈ ಬಜೆಟ್‌ನಲ್ಲಿ ವೆಚ್ಚದ ಗುಣಮಟ್ಟವೂ ಕೂಡ ವೃದ್ಧಿಸಿದೆ. ಯಾವುದೇ ಹೊಸ ತೆರಿಗೆಗಳನ್ನು ವಿಧಿಸದೇ ಇರುವುದು ಮಾರುಕಟ್ಟೆಗೆ ದೊಡ್ಡ ನೆಮ್ಮದಿಯನ್ನು ನೀಡಿದೆ. ದೇಶೀಯ ಬೇಡಿಕೆಯ ಹೆಚ್ಚುವುದರೊಂದಿಗೆ ಆರ್ಥಿಕ ಚಟುವಟಿಕೆಗಳೂ ಗರಿಗೆದರಲಿವೆ ಎಂಬ ಅಚಲವಾದ ನಂಬಿಕೆಯನ್ನು ಹೊಂದಿದೆ. ಮುಂದಿನ ದಿನಗಳ ಊಹೆಯ ವಿಚಾರದಲ್ಲಿಯೂ ಕೂಡ ಪಾರದರ್ಶಕತೆ ಹಾಗೂ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಈ ಕೇಂದ್ರ ಬಜೆಟ್ ಈ ಕಾಲಕ್ಕೆ ತಕ್ಕುನಾಗಿದೆ. ಹಾಗಾಗಿ ಆರ್ಥಿಕತೆಯ ಸಹಜ ಹುಮ್ಮಸ್ಸಿನ ಜಿಗಿತಕ್ಕೆ ವೇದಿಕೆ ಈಗ ಸಿದ್ಧವಾಗಿದೆ.



# ದುಡ್ಡಿನ ಪೆಟ್ಟಿಗೆ: ನಿಮ್ಮ ಹಣಕಾಸು ಅಗತ್ಯಗಳಿಗೆ ಚತುರ, ಸರಳ ದಾರಿ

ಬಜೆಟ್ ರೂಪಿಸುವುದೆಂದರೆ ನಿಮ್ಮದೇ ಹಣವನ್ನು ಹೇಗೆ ಖರ್ಚು ಮಾಡುವುದೆಂದು ಯೋಜನೆ ರೂಪಿಸುವುದು. ಹೀಗೆ 'ಬಜೆಟ್' ಯೋಜನೆಯನ್ನು ರೂಪಿಸುವುದರಿಂದ ಎಷ್ಟು ಖರ್ಚು ಮಾಡಬೇಕು, ಎಲ್ಲೆಲ್ಲ ಖರ್ಚು ಮಾಡಬೇಕು ಮತ್ತು ಅಂತಿಮವಾಗಿ ಎಷ್ಟು ಹಣ ನಿಮ್ಮ ಕೈಯಲ್ಲಿ ಉಳಿಯುತ್ತದೆ ಎಂಬುದನ್ನು ಮುಂಚಿತವಾಗಿಯೇ ನಿರ್ಧರಿಸಲು ಅವಕಾಶ ಸಿಗುತ್ತದೆ. ಇದನ್ನು ಇನ್ನೂ ಸರಳವಾಗಿ ಹೇಳಬೇಕೆಂದರೆ ಬಜೆಟ್ ಎಂದರೆ ನಿಮ್ಮ ವೆಚ್ಚ ಮತ್ತು ಆದಾಯ ಅಥವಾ ನಗದಿನ ಹೊರಹರಿವು ಹಾಗೂ ನಗದಿನ ಒಳಹರಿವಿನ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವುದು.



ನಿಮ್ಮ ಎಲ್ಲ ಹಣವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು, ನಿಮ್ಮ ಹಣಕಾಸಿನ ಗುರಿಗಳನ್ನು ಸಾಧಿಸಲು ಮತ್ತು ಸುದೀರ್ಘಾವಧಿ ಯಶಸ್ಸಿಗೆ ನಿಮ್ಮನ್ನು ನೀವು ಸಿದ್ಧಪಡಿಸಿಕೊಳ್ಳಲು ಬಜೆಟ್ ಒಂದೇ ಬಹುದೊಡ್ಡ ಸಾಧನ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಸೂಕ್ತವಾದ ಮತ್ತು ವಿವರವಾದ ಬಜೆಟ್‌ನ್ನು ಅನುಸರಿಸಬೇಕು ಎಂದು ನಿಮಗೆ ಅನೇಕ ಬಾರಿ ಸಲಹೆ ನೀಡಿರಬಹುದು. ಆದರೆ ನೀವು ಅದನ್ನು ಅನುಸರಿಸಿದ್ದೀರಾ? ಯಾವುದೇ ವ್ಯಕ್ತಿ ನಿಯತ್ತಿನಿಂದ ಬಜೆಟ್ ರೂಪಿಸಿ ಅದನ್ನು ಅಚ್ಚುಕಟ್ಟಾಗಿ ಅನುಸರಿಸುತ್ತಿದ್ದುದು ಕಡಿಮೆ. ಕೇವಲ ನೂರರಲ್ಲಿ ಒಬ್ಬರು ಮಾತ್ರ ಪ್ರತಿ ತಿಂಗಳು ಕಾಗದದ ಮೇಲೆ ಬಜೆಟ್ ಅಭ್ಯಾಸವನ್ನು ತಕ್ಕಮಟ್ಟಿಗೆ ಮಾಡಿಕೊಂಡು ಬರುತ್ತಿರಬಹುದು. ಹಾಗಾದರೆ ಬಜೆಟ್ ರೂಪಿಸುವ ಉತ್ತಮ ಹಾಗೂ ಹೆಚ್ಚು ಸುಲಭದ ಮಾರ್ಗ ಇದೆಯೇ? ಈ ಹಾದಿಯಲ್ಲಿ ಮುನ್ನಡೆಯಲು ಇಡೀ ಬಜೆಟ್ ಪ್ರಕ್ರಿಯೆಗೆ ಇರುವ ಒಳಮಾರ್ಗಗಳನ್ನು ತಿಳಿಸುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ.

## ಮಾರ್ಗದರ್ಶಿ ನಿಯಮಗಳು

ನೀವು ಮಾಡುವ ವೆಚ್ಚಗಳನ್ನು ವಿಭಾಗಿಸುವ ದೃಷ್ಟಿಯಿಂದ ಸರಳ ಎನ್ನಬಹುದಾದ ದುಡ್ಡಿನ ಪೆಟ್ಟಿಗೆಗಳನ್ನು ರಚಿಸುವುದು ಇಲ್ಲಿನ ಚಿಂತನೆ. ಇದನ್ನು ಅರ್ಥ ಮಾಡಿಕೊಳ್ಳಲು ಮತ್ತು ವಿಭಾಗಿಸಲು ಸುಲಭ ಹಾಗೂ ಸರಳವಾಗುವ ರೀತಿಯಲ್ಲಿ ಈ ಪೆಟ್ಟಿಗೆಗಳನ್ನು ರೂಪಿಸೋಣ. ನೀವು ಈ ದಾರಿಯಲ್ಲಿ ಮುಂದೆ ಸಾಗುತ್ತಿದ್ದಂತೆ ಮತ್ತು ಈ ಪಯಣದ ಸುಖವನ್ನು ಅನುಭವಿಸುತ್ತಿದ್ದಂತೆ ಇನ್ನಷ್ಟು ವಿವರವಾಗಿ ಇದನ್ನು ನೋಡಬಹುದು. ಹಾಗೆ ಮಾಡುತ್ತಾ ಪೆಟ್ಟಿಗೆಗಳ ಸಂಖ್ಯೆಗಳನ್ನು ಅಥವಾ ವಿಧಗಳನ್ನು ಹೆಚ್ಚಿಸುತ್ತಾ ಹೋಗಬಹುದು.

ನೀವು ಕೇಳಬಹುದು, ನಾನು ಹೇಗೆ ಇದನ್ನೆಲ್ಲ ನಿಭಾಯಿಸಲಿ? ಎಂದು.

ಸರಿ, ಆರಂಭದಲ್ಲಿ ನೀವು ನೀವು ನಿಮ್ಮ ಮನಸ್ಸಿನಲ್ಲಿರುವ ಪೆಟ್ಟಿಗೆಗಳಿಗೆ ಸುಮ್ಮನೆ ಹಣವನ್ನು ಹಂಚಿಕೆ ಮಾಡಿ. 'ಮನಸ್ಸಿನಲ್ಲಿರುವ ಹಣದ ಪೆಟ್ಟಿಗೆ' ಎನ್ನುವುದು ಯಾವತ್ತೂ 'ಮನಸ್ಸಿನಲ್ಲಿ ಮಂಡಿಗೆ ತಿಂದ' ಎಂಬ ಮಾತಿಗೆ ಸಮ. ಅದರಲ್ಲಿ ಯಾವುದೇ ಆಕರ್ಷಣೆ ಇರುವುದಿಲ್ಲ. ಹಾಗಾಗಿ ನೀವು ಒಂದು ಪೇಪರ್‌ನಲ್ಲಿ ಒಂದಷ್ಟು ಖರ್ಚುಗಳನ್ನು ಬರೆಯುತ್ತಾ ಹೋಗಬಹುದು. ಆರಂಭದಲ್ಲಿ ಸಣ್ಣ–ಪುಟ್ಟ ವೆಚ್ಚಗಳನ್ನು ಕೈಬಿಟ್ಟು ಕೇವಲ ದೊಡ್ಡ ಖರ್ಚುಗಳನ್ನು ಮಾತ್ರ ದಾಖಲಿಸಿ. ಆದರೆ, ಅದನ್ನೊಂದು ಸಮರ್ಪಕವಾದ ರೀತಿಯಲ್ಲಿ ಮಾಡುವುದು ಉತ್ತಮ. ನಿಮ್ಮ ವೆಚ್ಚಗಳನ್ನೆಲ್ಲ ಪೇಪರ್‌ನಲ್ಲಿ ದಾಖಲಿಸಲು ವಾರಕ್ಕೊಮ್ಮೆಯಾದರೂ ನಾನಾ ಪೆಟ್ಟಿಗೆಗಳಲ್ಲಿ ಇದನ್ನು ನಮೂದಿಸಬೇಕು. ಮೊದಲ ತಿಂಗಳಿನಲ್ಲಿ ಬೇಕಿದ್ದರೆ ನಾನಾ ಪೆಟ್ಟಿಗೆಗಳಿಗೆ ಹಂಚಿಕೆ ಮಾಡುವುದರ ಪೂರ್ವ ನಿರ್ಧಾರವನ್ನು ಕೈಬಿಟ್ಟು ಸುಮ್ಮನೇ ನಿಮ್ಮ ಖರ್ಚುಗಳನ್ನು ಗಮನಿಸಿ. ಆ ಬಳಿಕ ಮುಂದಿನ ತಿಂಗಳಿನಿಂದ ಹಂಚಿಕೆ ಮಾಡುವುದಕ್ಕೆ ಶುರುವಿಟ್ಟುಕೊಳ್ಳಿ.

ಒಂದು ಅಂಶವನ್ನು ನೆನಪಿಟ್ಟುಕೊಳ್ಳಿ, ನೀವು ಹೇಗೆ ವಿವರವಾದ ಯೋಜನೆಗಳನ್ನು ಮಾಡಿದ್ದೀರಿ ಎಂಬುದು ಮುಖ್ಯವಲ್ಲ. ಮುಖ್ಯವಾದುದು ಏನೆಂದರೆ ಎಷ್ಟು ಅಚ್ಚುಕಟ್ಟಾಗಿ ಅದನ್ನು ಮಾಡುತ್ತೀರಿ ಎಂಬುದು. ಇದು ಮ್ಯಾರಥಾನ್‌ನಲ್ಲಿ ನೀವು ಓಟ ಆರಂಭಿಸಿದಂತೆ. ಇಲ್ಲಿ ನಿಮ್ಮ ಗುರಿ ಇರುವುದು ಅಂತಿಮ ಗುರಿಯನ್ನು ದಾಟುವುದೇ ಹೊರತು ನಿಮ್ಮ ಸಮಯ, ಸ್ಪೀಡು ಮುಖ್ಯವಲ್ಲ.

## ಖರ್ಚಿನ ಪೆಟ್ಟಿಗೆಗಳು

ನಿಮ್ಮ ಎಲ್ಲ ನಗದಿನ ಹೊರಹರಿವನ್ನು ದಾಖಲಿಸಲು ನಾಲ್ಕು ಸರಳವಾದ ಪೆಟ್ಟಿಗೆಗಳನ್ನು ಮಾಡುವ ಮೂಲಕ ಆರಂಭಿಸೋಣ.

## ಮೊದಲ ಪೆಟ್ಟಿಗೆ: ನೀವು ಕೊಡಬೇಕಾಗಿರುವುದು

ಬಹುಶಃ ಸಾಕಷ್ಟು ಮನೆಗಳಲ್ಲಿ ಇರುವ ಸವಾಲು ಏನೆಂದರೆ ನಿಮ್ಮ ತಿಂಗಳ ಜವಾಬ್ದಾರಿಗಳನ್ನು ಪೂರೈಸಲು ಮಾಡಬೇಕಾಗಿರುವ ಪಾವತಿಗಳು. ಇದನ್ನು ನೀವು ಯಾವುದೇ ಕಾರಣಕ್ಕೂ ತಪ್ಪಿಸಲು ಸಾಧ್ಯವೇ ಇಲ್ಲ. ಇದರಲ್ಲಿ ನಿಮ್ಮ ಮನೆ ಬಾಡಿಗೆ, ಮನೆ/ಕಾರು/ನಿಮ್ಮ ವೈಯಕ್ತಿಕ ಬಳಕೆಯ ಇಎಂಐಗಳು, ಸೊಸೈಟಿ ನಿರ್ವಹಣೆ ಇತ್ಯಾದಿ ಸೇರಿರಬಹುದು. ಇವು ನಿಮ್ಮ ಆದಾಯದ ಶೇ.20ಕ್ಕಿಂತ ಕಡಿಮೆ ಇದೆ ಎಂದಾದರೆ ನೀವು ಅದೃಷ್ಟವಂತರು ಎಂದು ಪರಿಗಣಿಸಿ. ಆದರೆ, ನೆನಪಿರಲಿ–ಇದು ಶೇ.50ನ್ನು ಮೀರಿದೆ ಎಂದಾದರೆ ನೀವು ರೆಡ್ ಝೋನ್‌ನಲ್ಲಿ ಇದ್ದೀರಿ ಎಂದೇ ಅರ್ಥ. ಅಂತಹ ಅಪಾಯದ ಝೋನ್‌ನಲ್ಲಿ ನೀವು ಇರುವುದು ಹೌದಾದರೆ ನಿಮ್ಮ ಸಾಲದ ಹೊರೆಯನ್ನು ಇಳಿಸಿಕೊಳ್ಳಲು ತಕ್ಷಣ ಯೋಚನೆ ಮಾಡಿ ಮತ್ತು ಕಾಲ ಕ್ರಮೇಣ ನಿಮ್ಮ ಆದಾಯದ ಮೂಲಗಳನ್ನು ಹೆಚ್ಚಿಸುವ ಕಡೆಗೆ ಚಿಂತಿಸಿ.

## ಎರಡನೇ ಪೆಟ್ಟಿಗೆ: ದೈನಂದಿನ ಖರ್ಚುಗಳು

ಮುಂದಿನದ್ದು ಪ್ರತಿನಿತ್ಯವೂ ಎದುರಾಗುವ ಖರ್ಚುಗಳು. ಇವುಗಳಿಂದಲೂ ಕೂಡ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಶಾಲಾ ಶುಲ್ಕಗಳು, ಕಿರಾಣಿ ಸಾಮಾನುಗಳು, ವೈದ್ಯಕೀಯ ಖರ್ಚುಗಳು, ಸೇವಕಿಯ ಸಂಬಳ, ಟ್ಯೂಷನ್ ಶುಲ್ಕ, ಮೊಬೈಲ್/ಕೇಬಲ್/ಇಂಟರ್‌ನೆಟ್ ರೀಚಾರ್ಜ್‌ಗಳು ಇತ್ಯಾದಿ ಈ ಪೆಟ್ಟಿಗೆಯ ವ್ಯಾಪ್ತಿಯಲ್ಲಿ ಬರುತ್ತವೆ. ಈ ಖರ್ಚುಗಳು ಸಾಮಾನ್ಯವಾಗಿ ಪ್ರತಿ ತಿಂಗಳೂ ಬರುವಂತವು. ಇವುಗಳಲ್ಲಿ ದೊಡ್ಡ ಮಟ್ಟಿನ ಬದಲಾವಣೆಯೇನೂ ಆಗುವುದಿಲ್ಲ. ಈ ಪೆಟ್ಟಿಗೆಯು ನಿಮ್ಮ ನಗದಿನ ಒಳಹರಿವಿನ ಶೇ.20ರಿಂದ 30ನ್ನು ದಾಟಬಾರದು. ಆ ಮಿತಿಯನ್ನು ಅದು ಮೀರಿತು ಎಂದಾದರೆ ನಿಮ್ಮ ಮಿತಿಗಳನ್ನು ಮೀರಿ ನೀವು ಬದುಕುತ್ತಿದ್ದೀರಿ ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

## 3ನೇ ಪೆಟ್ಟಿಗೆ: ಉಳಿತಾಯ

**ಮುಂದಿನ ನಿಮ್ಮ ಆದ್ಯತೆ ಏನೆಂದರೆ ವಿಮೆ ಮತ್ತು ಹೂಡಿಕೆಯಂತಹ ಪಾವತಿಗಳ ಕಡೆಗೆ ನಿಮ್ಮ ನಗದು ಹರಿವನ್ನು ಗಮನಿಸುವುದು. ಈ ವಿಚಾರದಲ್ಲಿ ವಾರ್ಷಿಕ/ಮಾಸಿಕ ತಗಲುವ ಖರ್ಚುಗಳನ್ನು ಒಟ್ಟುಗೂಡಿಸಿ ಪ್ರತಿ ತಿಂಗಳ ನಿಶ್ಚಿತ ಹಂಚಿಕೆಯನ್ನು ಮಾಡಿ ಹಾಗೂ ಅದರಂತೆ ಉಳಿತಾಯ ಮಾಡುತ್ತ ಹೋಗಿ. ಇದರಲ್ಲಿ ನಿಮ್ಮ ಜೀವ ವಿಮಾ/ಆರೋಗ್ಯ ವಿಮಾ/ಮೋಟಾರ್ ವಿಮೆ ಪ್ರೀಮಿಯಂಗಳು, ಮ್ಯುಚ್ಯುಯಲ್ ಫಂಡ್ ಎಸ್‌ಐಪಿಗಳು, ಬ್ಯಾಂಕು/ಪೋಸ್ಟ್ ಆಫೀಸ್ ರಿಕರಿಂಗ್‌ಗಳು, ಪಿಪಿಎಫ್ ಉಳಿತಾಯಗಳು ಇತ್ಯಾದಿಗಳು ಬರುತ್ತವೆ.**

**ಹೂಡಿಕೆಗಳು ಮತ್ತು ವಿಮೆಯಲ್ಲಿ ಬಹುಮುಖ್ಯ ಪ್ರಾಶಸ್ತ್ಯ ವಿಮೆಗೆ. ಯಾಕೆಂದರೆ ಇಂದಿನ ಹಣಕಾಸು ಭದ್ರತೆಗೆ ಮತ್ತು ಉಳಿವಿಗೆ ವಿಮಾ ಸುರಕ್ಷತೆ ಅತ್ಯಗತ್ಯ. ಜೊತೆಗೆ ನಾಳಿನ ಹಣಕಾಸು ಯೋಗಕ್ಷೇಮದ ಕಡೆಗೂ ಆದ್ಯ ಗಮನವನ್ನು ಕೊಡಬೇಕು. ಸಾಮಾನ್ಯವಾಗಿ ಮೊದಲ ಎರಡು ಪೆಟ್ಟಿಗೆಗಳಿಂದ ಮಿಕ್ಕಿ ಉಳಿದದ್ದು ಈ ಕೊನೆಯ ಪೆಟ್ಟಿಗೆಯಲ್ಲಿ ಸ್ಥಾನವನ್ನು ಪಡೆಯುತ್ತವೆ. ಇದರ ಕನಿಷ್ಠ ಹಂಚಿಕೆ ಶೇ.20ರಷ್ಟಿರಬೇಕು. ಅದು ಶೇ.50ನ್ನು ಮೀರಿದ್ದಾದರೆ ನಿಮ್ಮ ಮುಂದಿನ ಯೋಜನೆಗಳನ್ನು ರೂಪಿಸಬೇಕಾಗುತ್ತದೆ.**

## ಪೆಟ್ಟಿಗೆ ನಾಲ್ಕು: ಐಚ್ಛಿಕ ವೆಚ್ಚಗಳು/ವಿವೇಚನಾ ಖರ್ಚುಗಳು

ನಾವೀಗ ಅತ್ಯಂತ ಆಸಕ್ತಿದಾಯಕ ಪ್ರಶ್ನೆಗೆ ಬಂದು ತಲುಪಿದ್ದೇವೆ. ತಿಂಗಳ ಕೊನೆಯಲ್ಲಿ ನಿಮ್ಮ ಪಾಕೆಟ್‌ನಲ್ಲಿ ಉಳಿದಿದ್ದಾರೂ ಎಷ್ಟು? ಸಾಮಾನ್ಯವಾಗಿ ನೀವು ನಿಮ್ಮೆಲ್ಲ ಹಣವನ್ನು ಅತ್ಯಂತ ಚತುರತೆಯಿಂದ ಹಂಚಿಕೆ ಮಾಡಿದರೆ ಶೇ.10ಕ್ಕಿಂತ ಕಡಿಮೆ ನಿಮ್ಮ ಪಾಲಿಗೆ ಉಳಿದಿರುತ್ತದೆ. ಅದು ಹೆಚ್ಚಾದರೆ ಉಳಿತಾಯದ ಪೆಟ್ಟಿಗೆಗೆ ಹೆಚ್ಚಿನ ಹಣವನ್ನು ಹಂಚಿಕೆ ಮಾಡಬೇಕು ಎಂಬುದರ ಸ್ಪಷ್ಟ ಸೂಚನೆಯಾಗಿರುತ್ತದೆ. ಶೇ.5ರಿಂದ 10ರಷ್ಟು ಹಣವನ್ನು ಮನರಂಜನೆ ಮತ್ತು ಇತರ ಅಂಶಗಳಿಗೆ ಖರ್ಚು ಮಾಡಿದರೆ ಸಾಕಾಗುತ್ತದೆ. ಒಂದು ಅಂದಾಜು ಪ್ರಕಾರ ನೀವು ಮಾಸಿಕ ಒಂದು ಲಕ್ಷ ರೂಪಾಯಿ ಗಳಿಸುತ್ತಿದ್ದರೆ 5000 ರೂ.ಗಿಂತ ಅಧಿಕ ಮೊತ್ತವನ್ನು ನೀವು

ಆಹಾರ ಅಥವಾ ಸಿನೆಮಾ ಅಥವಾ ಶಾಪಿಂಗ್ ಇತ್ಯಾದಿಗೆ ಪ್ರತಿ ತಿಂಗಳಿಗೆ ಖರ್ಚು ಮಾಡುವಂತಿಲ್ಲ. ನಿಮ್ಮ ಉಳಿತಾಯದ ಪೆಟ್ಟಿಗೆಯು ಶೇ.50ಕ್ಕಿಂತ ಹೆಚ್ಚಾಗಿದ್ದರೆ ಮಾತ್ರ ನಿಮ್ಮ ಈ ಖರ್ಚನ್ನು ಗರಿಷ್ಠ 10000 ರೂ. ತನಕ ವಿಸ್ತರಿಸಬಹುದು.

ಒಂದು ವೇಳೆ ನಿಮ್ಮ ಎಲ್ಲ ನಗದಿನ ಹರಿವು ಮುಗಿದು ಹೋಗಿವೆ ಎಂದಾದರೆ ನೀವು ನಿಶ್ಚಿತವಾಗಿ ಅಪಾಯದ ವಲಯದಲ್ಲಿದ್ದೀರಿ ಎಂದರ್ಥ! ನೀವು ತಕ್ಷಣ ಮಾಡಬೇಕಾದ ಕೆಲಸವೇನೆಂದರೆ ನಿಮ್ಮ ಹಣಕಾಸು ಮಾರ್ಗದರ್ಶಕರು/ಸಲಹೆಗಾರರ ಜೊತೆಗೆ ಕುಳಿತುಕೊಂಡು ಹೇಗೆ ನಿಮ್ಮ ಹಣಕಾಸನ್ನು ಇನ್ನಷ್ಟು ಉತ್ತಮವಾಗಿ ನಿರ್ವಹಿಸಬಹುದು ಎಂಬ ಬಗ್ಗೆ ಯೋಚಿಸಬೇಕು.

ಯೋಗ, ಜಿಮ್/ಪುಸ್ತಕಗಳು/ಆರೋಗ್ಯಕರ ಆಹಾರ/ತರಬೇತಿ/ವಿಚಾರ ಸಂಕಿರಣಗಳು ಇತ್ಯಾದಿ ವಿಷಯಗಳಿಗೆ ನೀವು ಖರ್ಚು ಮಾಡುತ್ತಿದ್ದರೆ ಈ ಪೆಟ್ಟಿಗೆಯನ್ನು ಅಥವಾ ದೈನಂದಿನ ವೆಚ್ಚಗಳ ಪೆಟ್ಟಿಗೆಯನ್ನು ಪರಿಗಣಿಸಬೇಕು. ಇಂತಹವುಗಳು ನಿಮಗೆ ನಿಜಕ್ಕೂ ಅನುಕೂಲವಾಗುತ್ತಿವೆಯೇ, ಪ್ರಯೋಜನಕ್ಕೆ ಬರುತ್ತಿವೆಯೇ, ಇವುಗಳನ್ನು ತಪ್ಪಿಸಬಹುದೇ ಎನ್ನುವ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ನಿಮಗೆ ಅವುಗಳಿಂದ ಪೂರ್ತಿ ಪ್ರಯೋಜನ ಇಲ್ಲ ಎನ್ನುವುದಾದರೆ ಅವುಗಳನ್ನು ಐಚ್ಛಿಕ ಎಂಬುದಾಗಿ ಗುರುತು ಹಾಕಿ.

## ಉಳಿತಾಯದ ಪೆಟ್ಟಿಗೆಗಳು

ಈ ಪೆಟ್ಟಿಗೆಗೆ ಸಾಕಷ್ಟು ಪ್ರಮಾಣದ ಹಣವನ್ನು ವಿನಿಯೋಗ ಮಾಡುತ್ತಿದ್ದೀರಿ ಎಂದು ನಿಮಗೆ ಅನ್ನಿಸಿದರೆ, ಅದರ ಒಳಗೊಮ್ಮೆ ಇಣುಕಿ ನೋಡಬೇಕಾದ ಅಗತ್ಯವಿರುತ್ತದೆ. ಈ ಉಳಿತಾಯದ ಪೆಟ್ಟಿಗೆಯೊಳಗೆ ಇನ್ನೊಂದಿಷ್ಟು ಪೆಟ್ಟಿಗೆಗಳನ್ನು ಕೂರಿಸಬಹುದೇ ಎನ್ನುವ ಬಗ್ಗೆ ಚಿಂತಿಸಬೇಕು. ಯಾಕೆ? ಯಾಕೆಂದರೆ ಈ ಪೆಟ್ಟಿಗೆಯು ಅತ್ಯಂತ ಮುಖ್ಯವಾದುದು, ಇದು ನೇರವಾಗಿ ನಿಮ್ಮ ನಿರಂತರ ಹಾಗೂ ಭವಿಷ್ಯದ ಹಣಕಾಸು ಯೋಗಕ್ಷೇಮಕ್ಕೆ ಕೊಂಡಿಯಾಗಿರುವಂತಹುದು. ಈ ಪೆಟ್ಟಿಗೆಯನ್ನು ಇನ್ನಷ್ಟು ವಿಭಾಗಗಳಾಗಿ ಮಾಡಿದರೆ ಅದರಲ್ಲಿ ನಿಮ್ಮ ಎಲ್ಲ ಹಣಕಾಸು ಯೋಗಕ್ಷೇಮಗಳನ್ನು ಸೂಕ್ತವಾಗಿ ಅಳವಡಿಸಲು ಸಾಧ್ಯವಾಗುತ್ತದೆ:

**ಪೆಟ್ಟಿಗೆ ಒಂದು:** ವಿಮೆ/ರಕ್ಷಣೆ

**ಪೆಟ್ಟಿಗೆ ಎರಡು:** ಸುದೀರ್ಘಾವಧಿ ಸಂಪತ್ತು ಸೃಷ್ಟಿ

**ಪೆಟ್ಟಿಗೆ ಮೂರು:** ಅಲ್ಪಾವಧಿ ಹಣ ನಿಯೋಜನೆ

ಯಾವ ವಿಭಾಗದಲ್ಲಿ ನೀವು ಬರುತ್ತೀರಿ?

ಇದೊಂದು ನಿಜಕ್ಕೂ ಮೋಜಿನ ಸಂಗತಿ. ನೀವು ಯಾವ ವಿಭಾಗದ ವ್ಯಾಪ್ತಿಗೆ ಒಳಪಡಬಹುದು ಎಂಬುದು ಈ ವಿನೋದದ ಆಟದಲ್ಲಿ ತಿಳಿಯುತ್ತದೆ. ನಿಮ್ಮ ಎಲ್ಲ ನಗದು ಹರಿವನ್ನು ಅಂದಾಜು ಮಾಡಿ ಅದನ್ನು ಒಂದು ತುಂಡು ಕಾಗದದಲ್ಲಿ ಬರೆದು ನಿಮ್ಮ ವಿಭಾಗ ಯಾವುದು ಎಂಬುದನ್ನು ಪತ್ತೆ ಮಾಡಿ!

ಈ ಆಟ ಸರಳವಾಗಿರಲಿ ಎಂಬ ಕಾರಣಕ್ಕಾಗಿ ನಾವು ಒಂದು ಮತ್ತು ಎರಡನೇ ಪೆಟ್ಟಿಗೆಗಳನ್ನು ಜೊತೆಗೂಡಿಸಿದೆವು. ಯಾಕೆಂದರೆ ಇವೆರಡೂ ತಪ್ಪಿಸಲು ಸಾಧ್ಯವೇ ಇಲ್ಲದ ಪೆಟ್ಟಿಗೆಗಳಾಗಿವೆ. ಅತ್ಯಂತ ಪ್ರಮುಖ ಪಾಲು ಎಂದರೆ ನಿಮ್ಮ ಒಟ್ಟಾರೆ ಆದಾಯದ ಉಳಿತಾಯದ ಪಾಲು.




| ವಿಭಾಗ | ನೀವು ಕೊಡಬೇಕಾಗಿರುವುದು ಮತ್ತು ದೈನಂದಿನ ಖರ್ಚು | ಉಳಿತಾಯ | ವಿವೇಚನಾಯುತ |
|---|---|---|---|
| ಸಾಮಾನ್ಯ/ಉತ್ತಮ | <30% | >50% | <10% |
| ಹಾದಿಯಲ್ಲಿದೆ | <40% | >30% | <10% |
| ಸವಾಲಿನದ್ದು | >50% | <30% | >10% |
| ಸವಾಲಿನದ್ದು | >75% | <10% | >15% |

**ದಯವಿಟ್ಟು ಗಮನಿಸಿ: ಇದು ಕೇವಲ ಸೂಚಕ ಮಾತ್ರ. ಇಲ್ಲಿನ ಅಂಕಿ–ಸಂಖ್ಯೆಗಳು 100ರ ವರೆಗೆ ತಲುಪದಿರಬಹುದು.**

**ಒಟ್ಟಾರೆಯಾಗಿ:** ಯಾರು ಯೋಜನೆ ರೂಪಿಸಲು ವಿಫಲರಾಗುತ್ತಾರೋ ಅವರು ವಿಫಲರಾಗಲು ಯೋಜಿಸಿರುತ್ತಾರೆ. ನಾವು ಇಲ್ಲಿ ಪ್ರಸ್ತಾಪ ಮಾಡಿದ ದುಡ್ಡಿನ ಪೆಟ್ಟಿಗೆಯ ವಿಧಾನವು ನಿಮ್ಮ ಹಣಕಾಸು ಬೇಕು–ಬೇಡಗಳನ್ನು ಉತ್ತಮ ರೀತಿಯಲ್ಲಿ ಯೋಜಿಸಲು ಅತ್ಯುತ್ತಮವಾದ ದಾರಿ. ಇಲ್ಲಿ ನೆನಪಿಡಬೇಕಾದ ಮುಖ್ಯವಾದ ಸಂಗತಿ ಏನೆಂದರೆ ಇದನ್ನು ಕೆಲವು ತಿಂಗಳು ಕಾಲ ನಿರಂತರವಾಗಿ ಮಾಡಿ ಮತ್ತು 'ಬಜೆಟ್ ರೂಪಿಸುವುದನ್ನು' ಬೆಳೆಸಿಕೊಳ್ಳಿ ಹಾಗೂ ಆ ಬಳಿಕ ಅಗತ್ಯವಿದ್ದರೆ ವಿವರವಾದ ಯೋಜನೆಗಳ ಬಗ್ಗೆ ಚಿಂತನೆ ಮಾಡಿ. ಇದರಿಂದ ನಿಮಗೆ ನಿಮ್ಮದೇ ಸ್ಥಾನಮಾನವನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ ಮತ್ತು ಮುಂಬರುವ ತಿಂಗಳುಗಳಲ್ಲಿ ನಿಮ್ಮದೇ ಆದ ಗುರಿಗಳನ್ನು ಸಾಧಿಸಲು ಸಾಧ್ಯವಾಗುತ್ತದೆ.

# ವರ್ಷಾಶನ: ನಿವೃತ್ತಿಯ ಸುರಕ್ಷಿತ ದಾರಿ...



ನಮ್ಮಲ್ಲಿ ಅನೇಕರಿಗೆ ಪ್ಯಾಂಡಮಿಕ್ ಎಚ್ಚರಿಕೆಯ ಕರೆಯಾಗಿ ಬಂದಿದೆ. ಜನ ಈಗ ಗುಣಮಟ್ಟದ ಜೀವನಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದಾರೆ. ಇಡೀ ಜೀವನವನ್ನು ದುಡಿಯುವುದಕ್ಕಾಗಿಯೇ ಕಳೆಯುವುದರಲ್ಲಿ ಅರ್ಥವಿಲ್ಲ ಎನ್ನುವುದು ಅವರಿಗೆ ಮನವರಿಕೆಯಾಗಿದೆ. ಅವಧಿಗಿಂತ ಮೊದಲೇ ನಿವೃತ್ತಿಯನ್ನು ಪಡೆದುಕೊಳ್ಳುವುದು ಇತ್ತೀಚಿನ ವಿದ್ಯಮಾನವಾಗಿದೆ. ಇದು ಇಂದು ಎಲ್ಲರ ಮನಸ್ಸಿನಲ್ಲಿ ಹಾದುಹೋಗಿದ್ದರೆ ಅಚ್ಚರಿಯೇನೂ ಇಲ್ಲ. ಆದರೆ ಭಾರತದಲ್ಲಿ ನಿವೃತ್ತಿ ಅಂದುಕೊಂಡಷ್ಟು ಸುಲಭವೇನೂ ಅಲ್ಲ. ಸಾಮಾಜಿಕ ಭದ್ರತೆ ಇಲ್ಲದೇ ಇರುವುದು, ನಿವೃತ್ತಿಯ ಕಡೆಗೆ ಸಾಕಷ್ಟು ಉಳಿತಾಯ ಮಾಡದೇ ಇರುವುದು ಮತ್ತು ಹಣಕಾಸಿನ ಅನಿಶ್ಚಿತತೆ ನಿವೃತ್ತಿ ಯೋಜನೆ ಅತ್ಯಂತ ಸವಾಲಿನದ್ದಾಗಿ ಮಾಡಿದೆ.

## ಲಭ್ಯವಿರುವ ನಿವೃತ್ತಿ ಮಾರ್ಗಗಳು

ಇಂದು ಅತ್ಯಂತ ಜನಪ್ರಿಯ ನಿವೃತ್ತಿ ಪರಿಹಾರಗಳೆಂದರೆ ಸರ್ಕಾರ ನೀಡುವ ಯೋಜನೆಗಳಾದ ಎನ್‌ಪಿಎಸ್, ಪಿಪಿಎಫ್, ನೌಕರರ ಭವಿಷ್ಯ ನಿಧಿ (ಇಪಿಎಫ್) ಮತ್ತು ಅಟಲ್ ಪಿಂಚಣಿ ಯೋಜನೆ (ಎಪಿವೈ). ಆದರೆ, ಸರ್ಕಾರದ ಯೋಜನೆಗಳಾಗಿ ಅವುಗಳಿಗೆ ಅವುಗಳದ್ದೇ ಆದ ಅನುಕೂಲ ಹಾಗೂ ಅನಾನುಕೂಲಗಳಿವೆ. ಸಾಕಷ್ಟು ಜನರು ಅವುಗಳು ಉಪಯುಕ್ತವಾಗಿವೆ ಎಂದು ಹೇಳಿದರೂ ಕೂಡ ಕೆಲವರು ಅವುಗಳಲ್ಲಿ ಇರುವ ಕಾರ್ಯಸಾಧುವಲ್ಲದ ಅಂಶಗಳನ್ನು ಮತ್ತು ಗರಿಷ್ಠ ಮೊತ್ತವನ್ನು ಪಡೆದುಕೊಳ್ಳುವ ವಿಚಾರದಲ್ಲಿ ಇರುವ ಮಿತಿಗಳನ್ನು ಗುರುತಿಸುತ್ತಾರೆ. ಇದರ ಜೊತೆಗೇ ಬಹಳಷ್ಟು ಹೂಡಿಕೆದಾರರು ಮ್ಯುಚ್ಯುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡುತ್ತಾರೆ. ಇದು ಸಂಪತ್ತು ಸೃಷ್ಟಿಸುವುದು ಮಾತ್ರವಲ್ಲದೆ ನಿವೃತ್ತಿಯನ್ನು ಸಮರ್ಥವಾಗಿ ನಿಭಾಯಿಸಬಹುದಾಗಿದೆ. ಅಪಾಯಗಳನ್ನು ಜೀರ್ಣಿಸಿಕೊಳ್ಳುವ ತಾಕತ್ತು ಇದ್ದರೆ ಕೆಲವು ಹೂಡಿಕೆದಾರರು ಮಾರುಕಟ್ಟೆ–ಚಾಲಿತ ಹೂಡಿಕೆಗಳಲ್ಲಿ ತೊಡಗಿಸಿಕೊಳ್ಳಬಹುದು. ನಿಮ್ಮ ನಿವೃತ್ತಿಯ ಚೀಲವನ್ನು ಎಲ್ಲಿ ಕಾಯ್ದಿಟ್ಟುಕೊಂಡಿದ್ದೀರಿ ಎನ್ನುವುದು ಮುಖ್ಯವಲ್ಲ. ಅದು ನಿಮ್ಮ ವೃದ್ಧಾಪ್ಯದಲ್ಲಿ ಖಾಲಿಯಾಗುವ ಅಥವಾ ನೀವು

ಅನಿವಾರ್ಯವಾಗಿ ನಿಮ್ಮ ಮಕ್ಕಳೊಂದಿಗೆ ಹಂಚಿಕೊಳ್ಳಬೇಕಾದ ಒತ್ತಡಕ್ಕೆ ಒಳಗಾಗಿಬಿಡಬಹುದು. ಜನರು ಇತ್ತೀಚೆಗೆ ಜೀವಮಾನಕ್ಕಾಗುವಷ್ಟು ಆದಾಯದ ಉತ್ಪನ್ನಗಳ ಕಡೆಗೆ ಹೆಚ್ಚು ಆಕರ್ಷಿತರಾಗಿದ್ದಾರೆ. ಅವು ಹೆಚ್ಚು ಏರುಪೇರಾಗುವುದಿಲ್ಲ ಮತ್ತು ಮಾರುಕಟ್ಟೆ ಚಾಲಿತ ಅಲ್ಲ. ಇಂತಹ ಉತ್ಪನ್ನಗಳು ನಿವೃತ್ತಿಯ ಬಗ್ಗೆ ಗಮನ ನೀಡಿರುವುದನ್ನು ಕಾಣಬಹುದು. ಇವುಗಳನ್ನು ವರ್ಷಾಶನ ಅಥವಾ ಪಿಂಚಣಿ ಯೋಜನೆಗಳು ಎಂದು ಕರೆಯುತ್ತೇವೆ. ಅವುಗಳ ಬಗ್ಗೆ ಸಲ್ಪ ಬೆಳಕು ಚೆಲ್ಲೋಣ.

## ವಾರ್ಷಿಕ ವೇತನ ಎಂದರೆ ಏನು?

ನಿಮ್ಮ ಜೀವಮಾನಕ್ಕೆ ಅಥವಾ ನಿಗದಿತ ಅವಧಿಗೆ ಖಚಿತವಾದ ಒಂದು ಆದಾಯವನ್ನು ಒದಗಿಸುವ ಯೋಜನೆಗಳೇ ವರ್ಷಾಶನ ಯೋಜನೆಗಳಾಗಿವೆ. ಅವು ಸ್ವರೂಪದಲ್ಲಿಯೇ ಒಬ್ಬ ವ್ಯಕ್ತಿಯನ್ನು ಅಪಾಯಗಳಿಂದ ರಕ್ಷಿಸುತ್ತದೆ. ಅದು ಆತ ಸುದೀರ್ಘ ಕಾಲ ಬದುಕಿದ್ದರೂ, ಆತ ತನ್ನ ಸಂಪನ್ಮೂಲಗಳನ್ನು ಬರಿದುಮಾಡಿಕೊಂಡರೂ ಇದು ಅನ್ವಯವಾಗುತ್ತದೆ. ಈ ವರ್ಷಾಶನ ಯೋಜನೆಯಲ್ಲಿ ಹೂಡಿಕೆದಾರರು ಸಾಮಾನ್ಯವಾಗಿ ಏಕಗಂಟಿನಲ್ಲಿ ಅಥವಾ ನಿಯಮಿತ ಕಂತಿನ ಮೂಲಕ ಪಾವತಿಯನ್ನು ಮಾಡಬಹುದಾಗಿದೆ. ಬಳಿಕ ನೀವು ಬದುಕಿರುವ ತನಕ ಅಥವಾ ಪೂರ್ವ ನಿರ್ಧರಿತ ನಿಶ್ಚಿತ ಅವಧಿಯ ತನಕ ನಿಮಗೆ ನಿಯಮಿತವಾಗಿ ಹಣ ಲಭ್ಯವಾಗುತ್ತ ಹೋಗುತ್ತದೆ.

ನೀವು ಸರಿಯಾಗಿ ಯೋಚನೆ ಮಾಡಿದರೆ, ವರ್ಷಾಶನ ಯೋಜನೆ ಮತ್ತು ಉತ್ತಮ ಟರ್ಮ್ ಲೈಫ್ ಇನ್ಶೂರೆನ್ಸ್ ಯೋಜನೆಗಳು ಒಂದಕ್ಕೊಂದು ಪೂರಕವಾಗಿವೆ. ಉತ್ತಮ ಟರ್ಮ್ ಲೈಫ್ ಇನ್ಶೂರೆನ್ಸ್ ಯೋಜನೆಯಲ್ಲಿ 'ಅನಿರೀಕ್ಷಿತ ಸಾವು' ಸಂಭವಿಸಿದರೆ ಕುಟುಂಬಕ್ಕೆ ಉಂಟಾಗುವ ಹಣಕಾಸಿನ ರಿಸ್ಕನ್ನು ತುಂಬಿಕೊಡುತ್ತದೆ. ಆದರೆ ವರ್ಷಾಶನ ಯೋಜನೆಯಲ್ಲಿ, ನೀವು ಸುದೀರ್ಘ ಕಾಲ ಬದುಕಿದರೆ ಸಾಕಷ್ಟು ಹಣಕಾಸು ಸಂಪನ್ಮೂಲಗಳನ್ನು ಒದಗಿಸುತ್ತದೆ. ನೀವು ಎಂಭತ್ತು ಮತ್ತು ಅದಕ್ಕಿಂತ ಹೆಚ್ಚು ವರ್ಷ ಬದುಕಿರುತ್ತೀರಿ ಎಂದುಕೊಳ್ಳಿ, ಆಗ ಸಾಕಷ್ಟು ಹಣಕಾಸು ಸಂಪನ್ಮೂಲಗಳ ಬೆಂಬಲ ಇಲ್ಲದೇ ಇದ್ದರೆ ಏನಾಗುತ್ತದೆ ಎಂಬುದನ್ನು ಯೋಚಿಸಿ. ನಿಮ್ಮನ್ನು ಕಾಳಜಿ ಮಾಡುವ, ಬೆಂಬಲಿಸುವ ಕುಟುಂಬವಿದ್ದರೆ ಅಥವಾ ನೀವು ಆಗರ್ಭ ಶ್ರೀಮಂತರಾಗಿದ್ದರೆ ಸಮಸ್ಯೆ ಉದ್ಭವಿಸುವುದಿಲ್ಲ. ಅದು ಇಲ್ಲದೇ ಹೋದರೆ ಅಂತಹ ಪರಿಸ್ಥಿತಿಯನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಈ ವರ್ಷಾಶನ ಉತ್ಪನ್ನವು ಇಂತಹ ಪರಿಸ್ಥಿತಿಯಿಂದ ನಿಮ್ಮನ್ನು ರಕ್ಷಿಸುತ್ತದೆ.

## ಎಷ್ಟು ಹಣ ನಿಮಗೆ ದಕ್ಕುತ್ತದೆ?

ವರ್ಷಾಶನ ಯೋಜನೆಗಳ ಮೇಲಿನ ಹೂಡಿಕೆಯಿಂದ ಲಭ್ಯವಾಗುವ ಗಳಿಕೆಯು ಅದು ತಕ್ಷಣದ ವರ್ಷಾಶನ ಯೋಜನೆಯೋ ಅಥವಾ ಮುಂದೂಡಲ್ಪಟ್ಟ ಯೋಜನೆಯೋ ಮತ್ತು ವರ್ಷಾಶನದ ಆರಂಭಕ್ಕೂ ಮುನ್ನ ಮಾಡಿಕೊಂಡಿರುವ ವಿಳಂಬಿತ ಅವಧಿಯ ಮೇಲೆ ಅವಲಂಬಿತವಾಗಿದೆ. ವಿಮಾದಾರರು ಪ್ರಸ್ತುತ ತಕ್ಷಣದ ವರ್ಷಾಶನ ಯೋಜನೆಗಳಿಗೆ ಶೇ.5.1ರಿಂದ ಶೇ.5.9ರ ನಡುವಿನ ಬಡ್ಡಿದರವನ್ನು ನೀಡುತ್ತವೆ. ಒಂದು ವೇಳೆ ಖರೀದಿ ಬೆಲೆ/ಪ್ರೀಮಿಯಂನ ಆದಾಯವನ್ನು ಆಯ್ಕೆ ಮಾಡಿಕೊಂಡರೆ ಅದನ್ನು ಅವಲಂಬಿಸಿ ಮುಂದೂಡಲ್ಪಟ್ಟ ಅವಧಿಯೊಂದಿಗೆ ಶೇ.11.50ರ ವರೆಗೂ ಇರುತ್ತದೆ. ದಯವಿಟ್ಟು ಗಮನಿಸಬೇಕಾದ ಸಂಗತಿ ಎಂದರೆ ಈ ದರಗಳು ಡೈನಾಮಿಕ್. ಹೊಸ ಖರೀದಿದಾರರಿಗಾಗಿ, ಮಾರುಕಟ್ಟೆ ವಿದ್ಯಮಾನಕ್ಕೆ ತಕ್ಕಂತೆ ಪ್ರತಿ ತ್ರೈಮಾಸಿಕಕ್ಕೆ ಇವು ಸಾಮಾನ್ಯವಾಗಿ ಬದಲಾಗುತ್ತವೆ. ಮುಂದೂಡಲ್ಪಟ್ಟ ಅವಧಿಯ ಸುದೀರ್ಘವಾಗಿದ್ದಷ್ಟೂ ಭರವಸೆ ನೀಡಲಾಗುವ ಆದಾಯವೂ ಅಧಿಕವಾಗಿರುತ್ತದೆ. ನಗದು ಹರಿವನ್ನು ಹೇಗೆ ಯೋಜಿಸಲಾಗುತ್ತದೆ ಎಂಬುದು ಇಲ್ಲಿನ ಪ್ರಶ್ನೆ. ಬಹು ವರ್ಷಾಶನ ಯೋಜನೆಗಳ 'ಸ್ಮಾರ್ಟ್ ಲ್ಯಾಡರ್' ಸೃಷ್ಟಿ ಮಾಡಿದರೆ ನಿಮ್ಮ ವರ್ಷಾಶನದ ಆದಾಯ ಕೂಡ ಕೆಲವೇ ವರ್ಷಗಳಲ್ಲಿ ಬೆಳೆಯುತ್ತ ಹೋಗುತ್ತದೆ. ಅದು ಹೇಗೆ ಸಾಧ್ಯ ಎಂಬ ಪ್ರಶ್ನೆಯೂ ಸಹಜ. ಅದರ ಆಸಕ್ತಿಪೂರ್ಣ ಲೆಕ್ಕಾಚಾರ ಇಲ್ಲಿದೆ.

## ವರ್ಷಾಶನ ಯೋಜನೆಯ ಆಯ್ಕೆ

ಇನ್ನಿತರ ಯಾವುದೇ ಹಣಕಾಸು ಉತ್ಪನ್ನದಂತೆ ಸಮರ್ಪಕವಾದ ವರ್ಷಾಶನ ಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಸುರಕ್ಷಿತ, ಆದಾಯಕರ ಹಾಗೂ ಲಿಕ್ವಿಡಿಟಿಯಿಂದ ಕೂಡಿರುವಂತಹುದು. ನೀವು ಒಂದು ವೇಳೆ ನಿವೃತ್ತಿಗಾಗಿ ಯೋಜಿಸುತ್ತಿದ್ದರೆ ಅಥವಾ ವರ್ಷಾಶನ ಪಾವತಿಗಳ ಅಗತ್ಯವನ್ನು ಹೊಂದಿದ್ದರೆ ವಿಮಾದಾರರು ನೀಡುವ ವರ್ಷಾಶನ/ಪಿಂಚಣಿ ಉತ್ಪನ್ನಗಳ ಬಗ್ಗೆ ಪರಿಶೋಧನೆಯನ್ನು ನಡೆಸಬೇಕು. ಇವು ಸಾಂಪ್ರದಾಯಿಕ ವಿಮಾ ಯೋಜನೆಗಳಂತೆ ಅಲ್ಲ. ವಿಮಾ ಯೋಜನೆಗಳಲ್ಲಿ ಹೂಡಿಕೆಗಳೊಂದಿಗೆ ಮಿಶ್ರಿತವಾದ ವಿಮಾ ಪ್ರಯೋಜನಗಳಿರುತ್ತವೆ. ಅಂತಹ ಯೋಜನೆಗಳು ಸಂಪೂರ್ಣವಾಗಿ ನಗದು ಹರಿವಿನ ಯೋಜನೆಗಳಾಗಿರುತ್ತವೆ. ಇದನ್ನು ಕೂಡ ಅದೇ ದೃಷ್ಟಿಯಲ್ಲಿ ನೋಡಲು ಸಾಧ್ಯವಿಲ್ಲ. ಅನೇಕ ಕಾರಣಗಳಿಂದಾಗಿ ಒಂದು ಉತ್ಪನ್ನವಾಗಿ ವರ್ಷಾಶನ ಯೋಜನೆಗಳು ಅನೇಕ ಸಾಂಪ್ರದಾಯಿಕ, ಸರ್ಕಾರಿ ಯೋಜನೆಗಳಿಗಿಂತಹ ಹೆಚ್ಚು ಅಂಕವನ್ನು ಪಡೆಯುತ್ತವೆ.



ಹಾಗಂತ ವರ್ಷಾಶನಗಳನ್ನು ನೇರವಾಗಿ ನಾವು ಮ್ಯುಚ್ಯುಯಲ್ ಫಂಡ್‌ಗಳ ಜೊತೆ ಹೋಲಿಕೆ ಮಾಡುವಂತಿಲ್ಲ. ಯಾಕೆಂದರೆ ಅವು ಭಿನ್ನ ಸ್ವರೂಪದವು ಮತ್ತು ಅವುಗಳನ್ನು ಖರೀದಿ ಮಾಡಲು ಅದರದ್ದೇ ಅನೇಕ ಕಾರಣಗಳಿರುತ್ತವೆ. ಚತುರ ಹೂಡಿಕೆದಾರನಾದವನು ಎರಡರಲ್ಲಿಯೂ ಹೂಡಿಕೆಯನ್ನು ಮಾಡಿಕೊಂಡು ವರ್ಷಾಶನದಲ್ಲಿ ಏಕಗಂಟಿನ ಹಣವನ್ನು ಮತ್ತು ಉಳಿದ ಭಾಗವನ್ನು 'ಬ್ಲಾಕ್' ಮಾಡದೇ ಇನ್ನೊಂದು ಬಂಡವಾಳ ಪಟ್ಟಿಯಲ್ಲಿ ಹೂಡಿಕೆ ಮಾಡಿದರೆ ಅದು ನಿರಂತರವಾಗಿ ಬೆಳೆಯುತ್ತ ಹೋಗುತ್ತದೆ. ನಿಮ್ಮ ಎಸ್‌ಐಪಿಗಳ ಜೊತೆಗೂ ನೀವು ಮುಂದುವರಿಯಬಹುದು. ವರ್ಷಾಶನವು ನಿಶ್ಚಿತವಾದ ನಗದು ಹರಿವನ್ನು ನೀಡಿದರೆ ನಿಮ್ಮ ಮ್ಯುಚ್ಯುಯಲ್ ಫಂಡ್ ಹೂಡಿಕೆ/ಎಸ್‌ಐಪಿಗಳು ನಿಮ್ಮ ಸಂಪತ್ತು ಬೆಳೆಯುವಂತೆ ಮಾಡುತ್ತವೆ. ಎರಡೂ ಕೂಡ ವಿಭಿನ್ನವಾದ ಉದ್ದೇಶಗಳನ್ನು ಹೊಂದಿವೆ. ಒಂದು ವರ್ಷಾಶನವನ್ನು ಖರೀದಿ ಮಾಡುವುದಕ್ಕೆ ಮುನ್ನ, ಕೇವಲ ಉತ್ಪಾದನಾ ಸ್ವರೂಪಗಳನ್ನು ನೋಡುವುದಕ್ಕೆ ಬದಲಾಗಿ, ವರ್ಷಾಶನವನ್ನು ಒದಗಿಸುವವರ ಹಿನ್ನೆಲೆ, ಅವರ ಗೌರವ, ಹಣಕಾಸು ಬಲವನ್ನು ಗಮನಿಸಿರಬೇಕು. ಇದಕ್ಕಾಗಿ ನೀವು ನಿಮ್ಮ ವಿಮಾ ಸಲಹೆಗಾರರ ಮಾರ್ಗದರ್ಶನವನ್ನು ಪಡೆಯುವುದು ಉತ್ತಮ. ನಿಮ್ಮಲ್ಲಿನ ಅನಿಶ್ಚಿತತೆ ನಿವಾರಣೆಯಾಗಿ ನಿಮ್ಮ ಕೊನೆಗಾಲದ ವರ್ಷಗಳಲ್ಲಿ ವರ್ಷಾಶನ ಯೋಜನೆಗಳ ವಿಚಾರದಲ್ಲಿ ಖಚಿತತೆ ಇರಲಿ ಎಂಬುದು ನಮ್ಮ ಕಳಕಳಿ.



**ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.**
(ARN–79020)
ಎಎಂಎಫ್ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು
ನಮ್ಮ ಸಂಪರ್ಕ: 9148319207, 080–42129917
ಇ–ಮೇಲ್: Mail: info@inspireindiafs.com

**ವಿಳಾಸ**
INSPIRE INDIA WEALTH PVT LTD
@ 65, 'Surasa Enclave'
1st Floor, Puttanna Road,
Gandhi Bazar, Basavanagudi
Bengaluru-560004

### ನಮ್ಮ ಸೇವೆಗಳು

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ವಿಮೆ
4. ಪ್ರಾಪರ್ಟಿ ಇನ್ವೆಸ್ಟ್ಮೆಂಟ್ಸ್
5. ತೆರಿಗೆ ಉಳಿತಾಯ ಬಾಂಡ್ ಗಳು
6. ಫೈನಾನ್ಸಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
7. ವೆಲ್ತ್ ಮ್ಯಾನೇಜ್ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ

### ಡಿಸ್ಕ್ಲೈಮರ್

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯು ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯಕ್ಕೆ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

**ಸಾಮಾನ್ಯವಾಗಿ ದುರ್ಗಮ ರಸ್ತೆಗಳು ಚೆಂದದ ಗುರಿಗಳನ್ನು ಮುಟ್ಟಿಸುತ್ತವೆ. ಯಾವತ್ತೂ ಹೂಡಿಕೆಯನ್ನು ಮಾಡುತ್ತಿರಿ ಮತ್ತು ಅದನ್ನು ಈಗಲೇ ಆರಂಭಿಸಿ.**

# WHY SHOULD YOU INVEST IN A LIQUID FUNDS?

- You can easily park your money for short intervals.
- Money kept at home or in savings account is not growing, the returns are lower than the inflation rate in our country.
- You can withdraw your investment anytime, without accruing any penalty.
- Since Liquid Funds invest in fixed income securities with short maturities, hence they bear a lower risk.
- No entry and exit loads, hence Liquid Funds are cost efficient for the investor.

## COMPARISON

Let's compare the following tax saving options u/s 80C...

| INDICATORS | MONEY KEPT AT HOME | SAVINGS ACCOUNT | LIQUID FUND |
|---|---|---|---|
| RETURNS | 0% | 4.0% | 6-7% |
| PREMATURE WITHDRAWAL | NA | Yes | Yes |
| RISK | High Risk | No Risk | Minimal Risk |
| TAXABILITY | NA | Interest is taxable | Dividend is subject to STT but is tax free in hands of the investor. In case of growth option, if you redeem before 1 year, you will be taxed as per your income tax slab |

ಮೊಟ್ಟ ಮೊದಲನೆಯದಾಗಿ ಈಪುಸ್ತಕ ಬರೆಯಲು ಕಾರಣವೇನೆಂದರೆ, ಹೂಡಿಕೆ ಎಂಬುದರ ಅರ್ಥವನ್ನು ಈಗಿನ ಸಂಕೀರ್ಣ ಅರ್ಥಕ್ಕಿಂತಒಂದಷ್ಟು ಸರಳೀಕರಿಸುವುದು.

ಹೂಡಿಕೆಯ ಬಗ್ಗೆ ಸಾಕಷ್ಟುಮಾಹಿತಿ ಇಲ್ಲದ ಬಹು ಮಂದಿ ನಮ್ಮಸುತ್ತಲೂ ಇದ್ದಾರೆ. ನಾವು ಏನನ್ನು ಹೂಡಿಕೆಮಾಡುತ್ತಿದ್ದೇವೆ?
ಎಷ್ಟು ಹೂಡಿಕೆ ಮಾಡುತ್ತಿದ್ದೇವೆ? ಮತ್ತು ಯಾವುದಕ್ಕಾಗಿ ಹೂಡಿಕೆ ಮಾಡುತ್ತಿದ್ದೇವೆ? ಎಂಬುದೇ ಗೊತ್ತಿಲ್ಲದ ವರ್ಗ ಅದು. ಈ ಪುಸ್ತಕಓದಿದ ನಂತರ ನಿಮ್ಮನ್ನು ನೀವು " ಸುಶಿಕ್ಷಿತ ಹೂಡಿಕೆದಾರ" ಎಂದು ಕರೆದುಕೊಳ್ಳಬಹುದು ಎಂಬುದನ್ನು ಖಾತ್ರಿಯಾಗಿ ಹೇಳಬಹುದು.




**Book price: Rs. 285/-**





**Sabse Bada Rupaiya Seminar**





**Women's Day Celebrations at Inspire India**